ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು) :

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ವಿಫುಲ ಅವಕಾಶಗಳಿವೆ. ಜವಳಿ ಪಾರ್ಕ್ ಸ್ಥಾಪನೆಯ ಅವಶ್ಯಕತೆಯನ್ನು ಜವಳಿ ಕೈಗಾರಿಕೋದ್ಯಮಿಗಳು ತೀರ್ಮಾನಿಸಿ, ಕನಿಷ್ಠ 10 ಉದ್ಯಮಿಗಳ ಎಸ್.ಪಿ.ವಿ. ರಚಿಸಿಕೊಂಡು ಅದರ ಮೂಲಕ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಸ್ಥಾಪನೆಗೆ 'ಚಿಕ್ಕಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್' ಎಂಬ ಹೆಸರಿನಲ್ಲಿ ಎಸ್.ಪಿ.ವಿ. ನೋಂದಣಿಯಾಗಿದ್ದು, ಅದರ ಮೂಲಕ ಭೂಮಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಇದುವರೆಗೆ ಜಿಲ್ಲೆಯಲ್ಲಿ ಯಾವುದೇ ಜವಳಿ ಪಾರ್ಕ್‌ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಮಂಜೂರಾತಿ ನೀಡಿರುವುದಿಲ್ಲ.

ಆ) ಕೇಂದ್ರ ಸರ್ಕಾರದ ಎಸ್.ಐ.ಟಿ.ಪಿ. ಯೋಜನೆಯಡಿ ಜವಳಿ ಪಾರ್ಕ್ ಸ್ಥಾಪನೆಗೆ ಯೋಜನಾ ಮೊತ್ತದ ಶೇ.40 ರಷ್ಟು ಗರಿಷ್ಠ ರೂ.40.00 ಕೋಟಿ ಅನುದಾನ ಒದಗಿಸಲು ಅವಕಾಶವಿರುತ್ತದೆ. ಕನಿಷ್ಠ 50 ಎಕರೆ ಭೂಮಿಯನ್ನು ಕೇಂದ್ರ ಸರ್ಕಾರವು ಅಪೇಕ್ಷಿಸುತ್ತದೆ. ರಾಜ್ಯ ಸರ್ಕಾರದ ಸುವರ್ಣ ವಸ್ತ್ರ ನೀತಿಯಡಿ ಜವಳಿ ಪಾರ್ಕ್ ಸ್ಥಾಪನೆಗೆ ಕನಿಷ್ಠ 25 ಎಕರೆ ಜಮೀನು ಬೇಕಾಗುತ್ತದೆ. ಸುವರ್ಣ ವಸ್ತ್ರ ನೀತಿಯಡಿ ಜವಳಿ ಪಾರ್ಕ್ ಸ್ಥಾಪನೆಗೆ ವಲಯ–1 ರಲ್ಲಿ ಯೋಜನಾ ಮೊತ್ತದ ಶೇ.40 ಗರಿಷ್ಠ ರೂ.12.00 ಕೋಟಿ, ವಲಯ–2 ರಲ್ಲಿ ಶೇ.20 ಎಷ್ಟು ಗರಿಷ್ಠ ರೂ.8.00 ಕೋಟಿ ಅನುದಾನ ಒದಗಿಸಲು ಅವಕಾಶವಿರುತ್ತದೆ. ವಲಯ–3 ರಲ್ಲಿ ಯಾವುದೇ ಆರ್ಥಿಕ ಸಹಾಯವಿರುವುದಿಲ್ಲ.

ನೀತಿಯಡಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಚಿಕ್ಕಬಳ್ಳಾಪುರ ತಾಲ್ಲೂಕನ್ನು ವಲಯ–2 ರಲ್ಲಿಯೂ ಉಳಿದ 5 ತಾಲ್ಲೂಕುಗಳನ್ನು ವಲಯ–1 ರಲ್ಲಿಯೂ ಪಟ್ಟಿ ಮಾಡಲಾಗಿದೆ.

ಅನುದಾನ ಬಿಡುಗಡೆ ಮತ್ತು ಉಳಿಕೆ

26 (34) ಶ್ರೀ ಮಂಜು ಎ. (ಅರಕಲಗೂಡು) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10, 2010–11 ಮತ್ತು 2011–12ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಇಲಾಖೆಗೆ ಘೋಷಿಸಲಾದ

ಅನುದಾನದ ಮೊತ್ತವೆಷ್ಟು; ಬಿಡುಗಡೆಯಾದ ಮೊತ್ತವೆಷ್ಟು; ಎಷ್ಟು ವೆಚ್ಚ ಮಾಡಲಾಗಿದೆ;

ಆ) ಈ ಸಾಲುಗಳಲ್ಲಿ ಆಯವ್ಯಯದಲ್ಲಿ ಇಲಾಖೆಯ ಮುಖಾಂತರ ಜಾರಿಗೊಳಿಸಲು ಪ್ರಕಟಿಸಿದ ಹೊಸ ಯೋಜನೆಗಳಾವುವು; (ಯೋಜನೆಗಳ ಸರ್ಕಾರಿ ಆದೇಶದ ಪ್ರತಿಗಳನ್ನು ಒದಗಿಸುವುದು);

ಇ) ಹಾಗಿದ್ದಲ್ಲಿ ಈ ಯೋಜನೆಗಳಿಗೆ ಘೋಷಿಸಲಾದ ಅನುದಾನವೆಷ್ಟು; ಎಷ್ಟು ಮೊತ್ತ ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚ ಮಾಡಲಾಗಿದೆ; ಯೋಜನೆಗಳ ಪ್ರಸಕ್ತ ಸ್ಥಿತಿ ಏನು (ವರ್ಷಾವಾರು ಮಾಹಿತಿ ಒದಗಿಸುವುದು);

ಈ) ಕೇಂದ್ರ ಸರ್ಕಾರದಿಂದ ಇಲಾಖೆಗೆ ಕಳೆದ 3 ಸಾಲಿನಲ್ಲಿ ಎಷ್ಟು ಸಹಾಯಧನ/ ಅನುದಾನ / ಸಾಲ/ One time grant ಬಂದಿರುತ್ತದೆ; ರಾಜ್ಯ ಸರ್ಕಾರವು ನೀಡಬೇಕಿದ್ದ ಮ್ಯಾಚಿಂಗ್ ಗ್ರ್ಯಾಂಟ್ಸ್ ಎಷ್ಟು ನೀಡಬೇಕಾಗಿತ್ತು; ಎಷ್ಟು ನೀಡಲಾಗಿದೆ; ಲ್ಯಾಪ್ಸ್ ಮಾಡಿದ ಗ್ರ್ಯಾಂಟ್ಸ್‌ಗಳೆಷ್ಟು (ವಿವರ ಒದಗಿಸುವುದು);

ಉ) ಕೇಂದ್ರ ಸರ್ಕಾರದ ಬಳಿ ಇಲಾಖೆಯ ಯಾವ ಯಾವ ಪ್ರಸ್ತಾವನೆಗಳು ಬಾಕಿ ಇರುತ್ತವೆ; ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಹೊಸದಾಗಿ ಎಷ್ಟು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ (ಪೂರ್ಣ ಮಾಹಿತಿ ಒದಗಿಸುವುದು)

ಊ) ಕಳೆದ ಮೂರು ವರ್ಷಗಳಲ್ಲಿ ಇಲಾಖೆಯಲ್ಲಿ ಎಷ್ಟು ಅಧಿಕಾರೇತರ ಸಮಿತಿ/ ಆಯೋಗಗಳನ್ನು ರಚಿಸಲಾಗಿದೆ; ಈ ಸಮಿತಿಗಳ ಆಡಳಿತ ನಿರ್ವಹಣೆಗಾಗಿ ಎಷ್ಟು ವೆಚ್ಚವಾಗಿದೆ?

ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು) :

ಅ) 2009–10ರಿಂದ 2011–12ರವರೆಗೆ ಇಲಾಖೆಗೆ ಆಯವ್ಯಯದಲ್ಲಿ ಘೋಷಿಸಲಾದ ಅನುದಾನ, ಬಿಡುಗಡೆ ಮತ್ತು ವೆಚ್ಚದ ವಿವರಗಳು ಇಂತಿವೆ.

(ರೂ.ಲಕ್ಷಗಳಲ್ಲಿ)

ವರ್ಷ	ಆಯವ್ಯಯ	ಬಿಡುಗಡೆ	ವೆಚ್ಚ
2009–10	11213.00	7873.97	7708.83
2010–11	13469.00	11352.27	11338.47

2011–12 (22.03.2012ರವರೆಗೆ)	10836.00	9732.54	9658.63

ಆ)

ವರ್ಷ	ಹೊಸ ಯೋಜನೆಗಳು
2009–10	1. ಸೈಜಿಂಗ್ ಘಟಕ ಸ್ಥಾಪನೆ 2. ವಸತಿ ಕಾರ್ಯಾಗಾರ ಯೊಜನೆ
2010–11	1. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ – ಬಂಡವಾಳ ಹೂಡಿಕೆ 2. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಹುಬ್ಬಳ್ಳಿಯಲ್ಲಿ ನೇಕಾರರ ಭವನ ನಿರ್ಮಾಣ 3. ಕೈಮಗ್ಗ ನೇಕಾರರಿಗೆ ಸುಧಾರಿತ ನ್ಯೂಮ್ಯಾಟಿಕ್ ಮಗ್ಗ ಮತ್ತು ಸೌರ ವಿದ್ಯುತ್ ದೀಪ ಒದಗಿಸುವುದು.
2011–12	ನೇಕಾರರಿಗೆ ವಿದ್ಯುತ್‌ಮಗ್ಗ ಒದಗಿಸುವುದು.

ಆದೇಶದ ಪ್ರತಿಗಳನ್ನು ಲಗತ್ತಿಸಿದೆ.

ಇ) ಅನುಬಂಧ–1 ರಲ್ಲಿ ಲಗತ್ತಿಸಿದೆ.

ಈ)

ವರ್ಷ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ	ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಮ್ಯಾಚಿಂಗ್ ಗ್ರ್ಯಾಂಟ್ ಅನುದಾನ	ಲ್ಯಾಪ್ಸ್ ಆದ ಗ್ರ್ಯಾಂಟ್
2009–10	313.68	118.64	ಇಲ್ಲ
2010–11	172.56	133.41	ಇಲ್ಲ
2011–12 (22.03.2012 ರವರೆಗೆ)	450.39	152.93	ಇಲ್ಲ

ಊ) ಕೇಂದ್ರ ಸರ್ಕಾರದ ಬಳಿ ಇಲಾಖೆಯ ಯಾವ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ.

ಕಳೆದ ಮೂರು ವರ್ಷಗಳಿಂದ ಸಲ್ಲಿಸಲಾದ ಪ್ರಸ್ತಾವನೆಗಳು ಈ ಕೆಳಗಿನಂತಿವೆ.

ವರ್ಷ	ಕೈಮಗ್ಗ ಕ್ಲಸ್ಟರ್‌ಗಳು		ಕೈಮಗ್ಗ ಗುಂಪುಗಳು		ಮಾರುಕಟ್ಟೆ ಪ್ರೋತ್ಸಾಹ ಧನ	
	ಕ್ಲಸ್ಟರ್‌ಗಳು	ಆರ್ಥಿಕ	ಗುಂಪುಗಳು	ಆರ್ಥಿಕ	ಸಹಕಾರ ಸಂಘಗಳು	ಆರ್ಥಿಕ
2009–10	5	260.62	16	176.85	65	49.75
2010–11	5	269.57	20	218.12	64	48.10
2011–12 (22.03.12 ರವರೆಗೆ)	–	–	–	–	**64**	**50.06**

ಋ) ಇಲಾಖೆಯಲ್ಲಿ ಅಧಿಕಾರೇತರ ಸಮಿತಿ/ ಆಯೋಗಗಳನ್ನು ಇದುವರೆಗೆ ರಚಿಸಿರುವುದಿಲ್ಲ.

ಅನುಬಂಧ–1

ಆ) 2009–10 ರಿಂದ 2011–12 ರವರೆಗೆ ಇಲಾಖೆಯ ಮುಖಾಂತರ ಜಾರಿಗೊಳಿಸಲು ಪ್ರಕಟಿಸಿದ ಹೊಸ ಯೋಜನೆಗಳು, ಈ ಯೋಜನೆಗಳಿಗೆ ಘೋಷಿಸಲಾದ ಅನುದಾನ, ಬಿಡುಗಡೆ ಮತ್ತು ವೆಚ್ಚದ ವಿವರಗಳು :

2009–10

1) ಸೈಜಿಂಗ್ ಘಟಕ ಸ್ಥಾಪನೆ

ಘೋಷಿಸಿದ ಅನುದಾನ–ರೂ.10.00 ಕೋಟಿ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಆಯವ್ಯಯ	ಬಿಡುಗಡೆ	ವೆಚ್ಚ	ಪ್ರಸಕ್ತ ಸ್ಥಿತಿ
1	2009–10	100.00	100.00	100.00	ಯೋಜನೆಯನ್ನು ಕಾರ್ಯಾಗತಗೊಳಿಸ ಲಾಗುತ್ತಿದೆ
2	2010–11	100.00	0	0	
3	2011–12 (22.03.2012ರವರೆಗೆ)	100.00	0	0	

2) ವಸತಿ ಕಾರ್ಯಾಗಾರ ಯೋಜನೆ
ಘೋಷಿಸಿದ ಅನುದಾನ–ರೂ.30.00 ಕೋಟಿ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಆಯವ್ಯಯ	ಬಿಡುಗಡೆ	ವೆಚ್ಚ	ಪ್ರಸಕ್ತ ಸ್ಥಿತಿ
1	2009–10	1500.00	1166.00	1166.00	ಯೋಜನೆಯನ್ನು ಕಾರ್ಯಾಗತಗೊಳಿಸ ಲಾಗುತ್ತಿದೆ
2	2010–11	600.00	541.00	527.50	
3	2011–12 (22.03.2012ರವರೆಗೆ)	500.00	335.08	335.08	

2010–11

1) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ–ಬಂಡವಾಳ ಹೂಡಿಕೆ
ಘೋಷಿಸಿದ ಅನುದಾನ–ರೂ.10.00 ಕೋಟಿ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಆಯವ್ಯಯ	ಬಿಡುಗಡೆ	ವೆಚ್ಚ	ಪ್ರಸಕ್ತ ಸ್ಥಿತಿ
1	2010–11	1000.00	750.00	750.00	ಯೋಜನೆಯನ್ನು ಕಾರ್ಯಾಗತಗೊಳಿಸ ಲಾಗುತ್ತಿದೆ
2	2011–12 (22.03.2012ರವರೆಗೆ)	0	0	0	

2) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಹುಬ್ಬಳ್ಳಿಯಲ್ಲಿ ನೇಕಾರರ ಭವನ ನಿರ್ಮಾಣ
ಘೋಷಿಸಿದ ಅನುದಾನ–ರೂ.3.00 ಕೋಟಿ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಆಯವ್ಯಯ	ಬಿಡುಗಡೆ	ವೆಚ್ಚ	ಪ್ರಸಕ್ತ ಸ್ಥಿತಿ
1	2010–11	300.00	300.00	300.00	ಕಾಮಗಾರಿ ಪ್ರಗತಿಯಲ್ಲಿದೆ
2	2011–12 (22.03.2012ರವರೆಗೆ)	0	0	0	

3) ಕೈಮಗ್ಗ ನೇಕಾರರಿಗೆ ಸುಧಾರಿತ ನ್ಯೂಮ್ಯಾಟಿಕ್ ಮಗ್ಗ ಮತ್ತು ಸೌರ ವಿದ್ಯುತ್ ದೀಪ ಒದಗಿಸುವುದು. ಘೋಷಿಸಿದ ಅನುದಾನ–ರೂ.7.00 ಕೋಟಿ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಆಯವ್ಯಯ	ಬಿಡುಗಡೆ	ವೆಚ್ಚ	ಪ್ರಸಕ್ತ ಸ್ಥಿತಿ
1	2010–11	150.00	0	0	25% ಅನುದಾನವಾಗಿರುವುದರಿಂದ ನೇಕಾರರು ಈ ಯೋಜನೆ ಪಡೆಯಲು ಮುಂದೆ ಬಂದಿರುವುದಿಲ್ಲ
2	2011–12 (22.03.2012ರವರೆಗೆ)	0	0	0	

2011–12

1) ನೇಕಾರರಿಗೆ ವಿದ್ಯುತ್ ಮಗ್ಗ ಒದಗಿಸುವುದು
ಘೋಷಿಸಿದ ಅನುದಾನ–ರೂ.15.00 ಕೋಟಿ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಆಯವ್ಯಯ	ಬಿಡುಗಡೆ	ವೆಚ್ಚ	ಪ್ರಸಕ್ತ ಸ್ಥಿತಿ
1	2011–12 (22.03.2012ರವರೆಗೆ)	1000.00	500.00	500.00	ಯೋಜನೆಯನ್ನು ಕಾರ್ಯಾಗತಗೊಳಿಸಲಾಗುತ್ತಿದೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ಇಲ್ಲಿ ಕೋನ್ ಸೈಜಿಂಗ್ ಘಟಕದ ಬದಲು ಕೋನ್ ಡೈಯಿಂಗ್ ಘಟಕ ಸ್ಥಾಪಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ಸರ್ಕಾರಿ ಆದೇಶದ ಸಂಖ್ಯೆ: ವಾಕೈ 4 ಜಕೈಯೋ 2009, ದಿ:03–08–2009.

2. ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಕೈಜಇ/ಬಿಐ/2/ಎಸ್‌ಪಿ/2011 ದಿ:08–09–2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಆದೇಶ ಸಂಖ್ಯೆ: ವಾಕೈ 04 ಜಕೈಯೋ 2009 ದಿ: 03–08–2009 ರಲ್ಲಿ ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿಯಲ್ಲಿ ರೂ.482.00 ಲಕ್ಷಗಳ ವೆಚ್ಚದಲ್ಲಿ ಸೈಜಿಂಗ್ ಘಟಕ ಸ್ಥಾಪನೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ್ದು, ಇದಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ 4851–00–108–0–06–059 ಇತರೆ ಖರ್ಚಿನಡಿ ರೂ.100.00 ಲಕ್ಷಗಳ ಅನುದಾನವನ್ನು ಯೋಜನಾ ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರಿಗೆ ಬಿಡುಗಡೆ ಮಾಡಿದೆ. ಉಳಿದ ಮೊತ್ತವನ್ನು ಸದರಿ ನಿಗಮ ಸಾಲದ ಮೂಲಕ ಭರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು ಸೈಜಿಂಗ್ ಘಟಕದ ಸ್ಥಾಪನೆಗೆ ಬಂಡವಾಳ ವೆಚ್ಚ ಪರಿಗಣಿಸಿ, 1956ರ ಕಂಪನಿಗಳ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಎಸ್‌ಪಿವಿ ರಚಿಸುವ ಮೂಲಕ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಮಾಡೂಲ್‌ನ ಅಡಿಯಲ್ಲಿ ಯೋಜನೆಯನ್ನು ಜಾರಿಗೊಳಿಸಲು ನಿರ್ಣಯಿಸಿತು. ಅದರನ್ವಯ ದಿನಾಂಕ: 31–10–2009 ರಂದು ಸ್ಥಳೀಯ ನೇಯ್ಗೆ ಉದ್ಯಮಿಗಳ ಸಭೆಯನ್ನು ರಬಕವಿ–ಬನಹಟ್ಟಿಯಲ್ಲಿ ಕರೆಯಲಾಗಿದ್ದು, ಅದರಲ್ಲಿ ಸೈಜಿಂಗ್ ಘಟಕದ ಬದಲಿಗೆ ಕೋನ್ ಡೈಯಿಂಗ್ ಘಟಕದ ಸ್ಥಾಪನೆ ಮಾಡಲು ಸಭೆಯು ತೀರ್ಮಾನಿಸಿತು.

ಜವಳಿ ಅಭಿವೃದ್ಧಿ ಆಯುಕ್ತರು ಮೇಲೆ ಓದಲಾದ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಟಿ.ಐ.ಡಿ.ಸಿ.) ಅವರು ಭಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿಯಲ್ಲಿ ಈಗಾಗಲೇ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ರೂ.482.00 ಲಕ್ಷಗಳ ವೆಚ್ಚದಲ್ಲಿ ಸೈಜಿಂಗ್ ಘಟಕ ಸ್ಥಾಪಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ, ರೂ.100.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದ್ದು, ಅದಕ್ಕೆ ಬದಲಾಗಿ ಸದರಿ ಜಾಗದಲ್ಲಿ ಕೋನ್ ಡೈಯಿಂಗ್ ಘಟಕ ಸ್ಥಾಪಿಸಲು ಅನುಮತಿ ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಅದರಂತೆ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ವಾಕೈ 28 ಜವಿಮ 2010 ಬೆಂಗಳೂರು, ದಿನಾಂಕ : 31-03-2011.

ಸರ್ಕಾರದ ಆದೇಶ ಸಂಖ್ಯೆ: ವಾಕೈ 28 ಜವಿಮ 2010 ದಿನಾಂಕ: 31-03-2011 ರಂದು ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಲಾಗಿದೆ ಹಾಗೂ ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿಯ ನೇಯ್ಗೆ ಉದ್ಯಮಿಗಳು ಸೈಜಿಂಗ್ ಘಟಕದ ಬದಲಾಗಿ ಕೋನ್ ಡೈಯಿಂಗ್ ಘಟಕ ಸ್ಥಾಪನೆಯ ಅವಶ್ಯಕತೆಯನ್ನು ವ್ಯಕ್ತ ಪಡಿಸಿದ್ದರ ಮೇರೆಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಟಿ.ಐ.ಡಿ.ಸಿ.) ಮತ್ತು ಜವಳಿ ಅಭಿವೃದ್ಧಿ ಆಯುಕ್ತರ ಕೋರಿಕೆಯ ಮೇರೆಗೆ ಕೆ.ಎಸ್.ಟಿ.ಐ.ಡಿ.ಸಿ. ಮೂಲಕ ಸರ್ಕಾರದಿಂದ ಶೇ.26 ಜಂಟಿ ಈಕ್ವಿಟಿ ಭಾಗವಹಿಸುವಿಕೆಯೊಂದಿಗೆ ಪಿ.ಪಿ.ಪಿ. ಮಾಡ್ಯೂಲ್ ಅಡಿಯಲ್ಲಿ ಬಾಗಲಕೋಟೆಯಲ್ಲಿ ಜಿಲ್ಲೆಯ ರಬಕವಿ-ಬನಹಟ್ಟಿಯಲ್ಲಿ ಉದ್ದೇಶಿತ ಯೋಜನೆಯನ್ನು ಸೈಜಿಂಗ್ ಘಟಕದಿಂದ ಕೋನ್ ಡೈಯಿಂಗ್ ಘಟಕಕ್ಕೆ ಬದಲಾಯಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಅಲ್ಲದೆ, ಸರ್ಕಾರ ಈಗಾಗಲೇ ಲೆಕ್ಕ ಶೀರ್ಷಿಕೆ 4851-00-108-0-06-059ರಡಿ ಬಿಡುಗಡೆ ಮಾಡಿರುವ ರೂ.100.00 ಲಕ್ಷ (ರೂಪಾಯಿ) ನೂರು ಲಕ್ಷಗಳು ಮಾತ್ರ) ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ರಾಜ್ಯ

ಸರ್ಕಾರದ ಈಕ್ವಿಟಿಯಾಗಿ ಲೆಕ್ಕ ಶೀರ್ಷಿಕೆ 4851-00-190-0-00-211ರಡಿ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

1. ಈಗಾಗಲೇ ಬಿಡುಗಡೆಗೊಳಿಸಿರುವ ರಾಜ್ಯ ಸರ್ಕಾರದ ಈಕ್ವಿಟಿ ಹಣ ರೂ.1.00 ಕೋಟಿಗಳನ್ನು ಕೇಂದ್ರ ಸರ್ಕಾರದಿಂದ ಕೋರಿರುವ ಅನುದಾನ ಅನುಮೋದನೆಯಾದ ನಂತರ ಉಪಯೋಗಿಸಿಕೊಳ್ಳತಕ್ಕದ್ದು.
2. ಕೆ.ಎಸ್.ಟಿ.ಐ.ಡಿ.ಸಿ. ಸಂಸ್ಥೆ ಷೇರಿನ ಪಾಲನ್ನು ಶೇ.20 ರಿಂದ ಶೇ.26 ಕ್ಕೆ ಹೆಚ್ಚಿಸಿಕೊಳ್ಳತಕ್ಕದ್ದು. ಹಾಗೂ ಈ ಹೆಚ್ಚಿನ ಶೇ.6ರ ಪಾಲನ್ನು ಕೆ.ಎಸ್.ಟಿ.ಐ.ಡಿ.ಸಿ. ಸಂಸ್ಥೆಯೇ ಭರಿಸತಕ್ಕದ್ದು.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 04 ಜಕೈಯೋ 2009 ದಿನಾಂಕ: 03-08-2009 ರಲ್ಲಿ ಲೆಕ್ಕ ಶೀರ್ಷಿಕೆ 4851-00-108-0-06-059-ಇತರೆ ಖರ್ಚು ಅಡಿ ಇರುವ ರೂ.100.00 ಲಕ್ಷಗಳ ಅನುದಾನವನ್ನು ಪೂರಕ ಅಂದಾಜು -2 ರಲ್ಲಿ ಈಕ್ವಿಟಿ ಷೇರು ಬಂಡವಾಳವಾಗಿ ಲೆಕ್ಕ ಶೀರ್ಷಿಕೆ 4851-00-190-0-00-211 ರಡಿ ಮಾರ್ಪಡಿಸಿದ್ದು, ಅದರಂತೆ, ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವಂತೆ ಮಹಾಲೇಖಪಾಲಕರು (ಲೆಕ್ಕಪತ್ರ/ಲೆಕ್ಕ ಪರಿಶೋಧನೆ) ಬೆಂಗಳೂರು ಇವರಿಗೆ ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1841 ವೆಚ್ಚ(1)/10 ದಿನಾಂಕ: 03-12-2010ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಆರ್. ಅನಂತರಾಮು
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2009–10ನೇ ಸಾಲಿನ ನೇಕಾರರ ವಸತಿ ಕಾರ್ಯಾಗಾರ ಯೋಜನೆಯ ಮಾರ್ಗಸೂಚಿ ಹೊರಡಿಸುವ ಕುರಿತು.

ಓದಲಾಗಿದೆ: 1. 2009–10ನೇ ಸಾಲಿನ ಆಯವ್ಯಯ.
2. ಸರ್ಕಾರಿ ಆದೇಶ ಸಂಖ್ಯೆ:ವಾಕೈ 37 ಜಕೈಯೋ 2009 ದಿ:28–10–2009.

ಪ್ರಸ್ತಾವನೆ :

2009–10ನೇ ಸಾಲಿನ ಆಯವ್ಯಯದಲ್ಲಿ ಬಡ ನೇಕಾರರಿಗೆ ತಮ್ಮ ವೃತ್ತಿಯನ್ನು ಸೂಕ್ತ ಪರಿಸರದಲ್ಲಿ ನಿರ್ವಹಿಸಲು ಅನುಕೂಲವಾಗುವಂತೆ 5,000 ಮಗ್ಗದ ಕೋಣೆಯುಳ್ಳ ಮನೆಗಳನ್ನು ತಲಾ ರೂ.60000/–ಗಳ ವೆಚ್ಚದಲ್ಲಿ ನಿರ್ಮಿಸಲು ರೂ.30.00 ಕೋಟಿಗಳ ಅನುದಾನವನ್ನು ನೀಡಲು ಘೋಷಿಸಲಾಗಿದೆ.

ಸದರಿ ಘೋಷಣೆಯನ್ವಯ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯಡಿ ಅನುಷ್ಠಾನಗೊಳಿಸಲು ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ, ಈ ಸಂಬಂಧ ಫಲಾನುಭವಿಗಳು ಹೊಂದಿರಬೇಕಾದ ಅರ್ಹತೆ, ಆಯ್ಕೆ, ಪ್ರಸ್ತಾವನೆಯನ್ನು ಸಿದ್ಧಪಡಿಸುವುದು, ಮಂಜೂರಾತಿ, ಅನುಷ್ಠಾನ ಮತ್ತು ಮಾನಿಟರಿಂಗ್ ಮುಂತಾದ ಅಂಶಗಳನ್ನೊಳಗೊಂಡ ಕಾರ್ಯ ವಿಧಾನಗಳ ಮಾರ್ಗ ಸೂಚಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿದೆ. ಅದರಂತೆ, ಈ ಕೆಳಕಂಡ ಆದೇಶ.

ಆದೇಶ

ಸರ್ಕಾರಿ ಆದೇಶ ಸಂಖ್ಯೆ: ವಾಕೈ 37 ಜಕೈಯೋ 2009 ಬೆಂಗಳೂರು ದಿ:02–01–2010.

ಕೈಮಗ್ಗ ಮತ್ತು ಜವಳಿ ಇಲಾಖೆ, 2009–10ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ್ದು, ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯಡಿ ಅನುಷ್ಠಾನಗೊಳಿಸುವ ಸಂಬಂಧ ಇರಬೇಕಾದಂತಹ

ಅರ್ಹತೆಗಳು, ಆಯ್ಕೆ, ಪ್ರಸ್ತಾವನೆಯನ್ನು ಸಿದ್ಧಪಡಿಸುವುದು, ಮಂಜೂರಾತಿ, ಅನುಷ್ಠಾನ ಮತ್ತು ಮಾನಿಟರಿಂಗ್ ಮುಂತಾದ ಅಂಶಗಳನ್ನೊಳಗೊಂಡ ಕಾರ್ಯವಿಧಾನಗಳ ಬಗ್ಗೆ ಮಾರ್ಗಸೂಚಿಯನ್ನು ಇದರೊಂದಿಗೆ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಆರ್. ಅನಂತರಾಮು
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ನೇಕಾರರ ವಸತಿ ಕಾರ್ಯಾಗಾರ ಯೋಜನೆಗಳು – ಮಾರ್ಗಸೂಚಿಗಳು

ಪೀಠಿಕೆ :

2009–10ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರವು, ನೇಕಾರರು ಸಂಕಷ್ಟದಲ್ಲಿದ್ದು, ಅವರಿಗೆ ಸಾಮಾಜಿಕ ಬದುಕನ್ನು ರೂಪಿಸಿ ಆರ್ಥಿಕವಾಗಿ ಸದೃಢಗೊಳಿಸಲು ಸರ್ಕಾರವು ವಸತಿ ಕಾರ್ಯಾಗಾರ ಯೋಜನೆಯನ್ನು ಘೋಷಿಸಿರುತ್ತದೆ. ನೇಕಾರಿಕೆ ವೃತ್ತಿಯು ಮೂಲತಃ ಗುಡಿ ಕೈಗಾರಿಕೆಯಾಗಿದ್ದು, ನೇಕಾರರು ಅವರು ವಾಸಿಸುವ ಸ್ಥಳದಲ್ಲಿಯೇ ನೇಯ್ಗೆ ಚಟುವಟಿಕೆಗಳನ್ನು ಮಾಡಲು ಬಯಸುತ್ತಾರೆ. ಆದ್ದರಿಂದ ಉತ್ತಮ ಕಾರ್ಯಸ್ಥಳ, ಪರಿಸರ, ಉತ್ತಮವಾದ ಬೆಳಕಿನ ವಾತಾವರಣ ಹಾಗೂ ಕೆಲಸದ ಅವಧಿಯಲ್ಲಿ ಹೆಚ್ಚಳ ಹೊಂದಲು ಮೂಲಭೂತ ಸೌಕರ್ಯಗಳೊಂದಿಗೆ ನೇಕಾರರ ತಲೆ ಮೇಲೆ ಒಂದು ಸೂರನ್ನು ನೀಡುವುದು ಇದರ ಉದ್ದೇಶವಾಗಿರುತ್ತದೆ. ಕೈಮಗ್ಗ ನೇಕಾರರಿಗೆ ಚಾಲ್ತಿಯಲ್ಲಿದ್ದ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನೆ ಅನುಷ್ಠಾನದ ಫಲಶೃತಿಗಳ ಮೌಲ್ಯಮಾಪನದಿಂದ ವ್ಯಕ್ತಗೊಂಡ ಅಂಶದ ಮೇರೆಗೆ ಪ್ರತಿ ಘಟಕದ ವೆಚ್ಚವನ್ನು ರೂ. 60,000/–ಗಳಿಗೆ ನಿಗದಿಪಡಿಸಿ ಜಾರಿಗೊಳಿಸಲು ಸರ್ಕಾರವು ತೀರ್ಮಾನಿಸಿದೆ.

ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನೆಯು 10ನೇ ಪಂಚವಾರ್ಷಿಕ ಯೋಜನೆಯ ಅವಧಿಗೆ ಮುಕ್ತಾಯವಾಗಿರುತ್ತದೆ. ಈ ಯೋಜನೆಯ ಅನುಷ್ಠಾನದಲ್ಲಿ ಆಗಿರುವ ಸುಧಾರಣೆ, ಪರಿಣಾಮ ಮತ್ತು ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಕುರಿತು 2004–05ನೇ ಸಾಲಿನಲ್ಲಿ ಯೋಜನೆಯ ಸಮಗ್ರ ಮೌಲ್ಯಮಾಪನವನ್ನು ನಡೆಸಲಾಗಿರುತ್ತದೆ. ಈ ಮೌಲ್ಯಮಾಪನದ ವರದಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ (RGRHC) ತಾಲ್ಲೂಕು ಪಂಚಾಯಿತಿ ಮುಖಾಂತರ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವಲ್ಲಿ ಸಾಕಷ್ಟು ವಿಳಂಭವಾಗುತ್ತಿರುವುದನ್ನು ಗುರುತಿಸಲಾಗಿದೆ. ಆದ್ದರಿಂದ ನಿಗದಿತ ಅವಧಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಂದಲೇ ನೇರವಾಗಿ ಹಣ ಬಿಡುಗಡೆ ಮಾಡಿ ಅನುಷ್ಠಾನದ ಕೆಲಸವನ್ನು ನಿರ್ವಹಿಸಲು ಅಭಿಪ್ರಾಯ ನೀಡಲಾಗಿರುತ್ತದೆ.

ಆದುದರಿಂದ ರಾಜ್ಯದ ನೇಕಾರರಿಗೆ ಸಾಮಾಜಿಕ ಭದ್ರತೆಯ ನೆಲೆಗಟ್ಟಿನಲ್ಲಿ ನೆಮ್ಮದಿ ಜೀವನವನ್ನು ಸಾಗಿಸಲು ಅವಕಾಶ ಕಲ್ಪಿಸಿಕೊಡಲು ಮತ್ತು ಈ ಯೋಜನೆಯ ಅನುಷ್ಠಾನದಲ್ಲಿ ಅನುಸರಿಸಬೇಕಾದ ವಿವಿಧ ಕಾರ್ಯವಿಧಾನಗಳ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ.

1) ಫಲಾನುಭವಿಗಳು :

ಕರ್ನಾಟಕ ರಾಜ್ಯದ ನಿವಾಸಿಗಳಾಗಿದ್ದು, ಕೈಮಗ್ಗ, ವಿದ್ಯುತ್ ಚಾಲಿತ ಮಗ್ಗ, ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಮೀಣ ಪ್ರದೇಶದ ಮತ್ತು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ನೇಕಾರರಿಗೆ ಮಾತ್ರ ಅನ್ವಯಿಸುತ್ತದೆ.

2) ಹಣಕಾಸಿನ ನೆರವು :

ಅ) ಒಟ್ಟು ಘಟಕ ವೆಚ್ಚದ ಮೊತ್ತ	ರೂ.65,000/–
ಆ) ಸರ್ಕಾರದ ಗರಿಷ್ಟ ಸಹಾಯಧನ	ರೂ.40,000/–
ಇ) ಸರ್ಕಾರದಿಂದ ಸಾಲ	ರೂ.20,000/–
ಈ) ನೇಕಾರರ/ಫಲಾನುಭವಿಯ ವಂತಿಕೆ	ರೂ. 5,000/–

ಉ) ಸಾಲದ ಪಾಲು ಮೊದಲನೇ ಕಂತು ಹಣ ಬಿಡುಗಡೆಯಾದ ನಂತರ 6 ತಿಂಗಳು ಮಾರಿಟೋರಿಯಂ ಅವಧಿ ಹೊರತುಪಡಿಸಿ ಶೇ. 9ರ ಬಡ್ಡಿ ಸಹಿತ ಸಾಲದ ಮೊತ್ತವನ್ನು 20 ಅರ್ಧವಾರ್ಷಿಕ ಸಮಕಂತುಗಳಲ್ಲಿ ಫಲಾನುಭವಿಯಿಂದ ವಸೂಲು ಮಾಡಿ ಸರ್ಕಾರಕ್ಕೆ ಮರುಪಾವತಿಸಲು ಅನುಷ್ಠಾನಾಧಿಕಾರಿಯು ಕ್ರಮವಹಿಸುವುದು.

3) ನಿವೇಶನ/ಜಾಗದ ಲಭ್ಯತೆ :

ವಸತಿ ಕಾರ್ಯಾಗಾರವನ್ನು ನಿರ್ಮಿಸಿಕೊಳ್ಳುವಲ್ಲಿ ಫಲಾನುಭವಿಯು ಪುರುಷರಾದರೆ ಜಂಟಿ ಖಾತೆ, ಮಹಿಳೆಯಾದಲ್ಲಿ ತನ್ನ ಸ್ವಂತ ಹೆಸರಿನಲ್ಲಿ ಕಡ್ಡಾಯವಾಗಿ ಖಾಲಿ ನಿವೇಶನವನ್ನು ಹೊಂದಿರತಕ್ಕದ್ದು. ಇದರ ಕನಿಷ್ಠ ಅಳತೆಯು "20 x 30" ಅಡಿ ವಿಸ್ತೀರ್ಣವುಳ್ಳದ್ದಾಗಿರಬೇಕು. ಘಟಕ ವೆಚ್ಚದಲ್ಲಿ ನಿವೇಶನದ ಮೌಲ್ಯವು ಒಳಗೊಂಡಿರುವುದಿಲ್ಲ. ಫಲಾನುಭವಿಯು ಹೊಂದಿರುವ ನಿವೇಶನದ/ಜಾಗದ ಮೇಲೆ ಯಾವುದೇ ತರಹದ ತಕರಾರು/ ವ್ಯಾಜ್ಯ/ಮೊಕದ್ದಮೆಗಳಿಂದ ಹೊರತಾಗಿರಬೇಕು.

4) ಫಲಾನುಭವಿಗಳ ಮೂಲ :

ರಾಜ್ಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ನೊಂದಾಯಿಸಲ್ಪಟ್ಟಿರುವ, ಕೈಮಗ್ಗ ನೇಕಾರರ ಸಹಕಾರ ಸಂಘ, ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳಲ್ಲಿ ನೋಂದಾಯಿತ ಸದಸ್ಯರು, ಜವಳಿ ಚಟುವಟಿಕೆಗಳ ವಿವಿದ್ದೋದ್ದೇಶಗಳ ಸಹಕಾರ ಸಂಘಗಳಲ್ಲಿ ನೋಂದಾಯಿತ ಸದಸ್ಯರು, ಜಿಲ್ಲಾ ಮಟ್ಟದ/ರಾಜ್ಯ ಮಟ್ಟದ ನೇಕಾರರ ಮಹಾ ಮಂಡಳಿಗಳು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರತ ರಾಗಿರುವ ನೋಂದಾಯಿತ ಸದಸ್ಯರು, ನೇಯ್ಗೆ ಚಟುವಟಿಕೆಗಳಲ್ಲಿ ತೊಡಗಿರುವ NGO/ಸ್ವಯಂ ಸೇವಾ ಸಂಘ ಸಂಸ್ಥೆಗಳಲ್ಲಿನ ಸದಸ್ಯರು ಮತ್ತು ಕಾರ್ಯನಿರತರಾಗಿರುವ ಅಸಂಘಟಿತ ವಲಯದ ನೇಕಾರರು ಅರ್ಹರಾಗಿರುತ್ತಾರೆ.

5) ಅರ್ಹ ಫಲಾನುಭವಿಗಳ ಆಯ್ಕೆ :

ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕವಾಗಿ ವ್ಯಾಪಕ ಪ್ರಚಾರದ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು. ಜಿಲ್ಲಾ ಕಛೇರಿಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಮಾಹಿತಿಯ ಆಧಾರದ ಮೇಲೆ ಪ್ರತಿ ಫಲಾನುಭವಿಯ ವಾಸ ಸ್ಥಳ, ಕಾರ್ಯಚಟುವಟಿಕೆ ಮತ್ತು ಅರ್ಹತೆಯ ವಿವರಗಳನ್ನು ಕೂಲಂಕುಷವಾಗಿ ಸ್ಥಳ ಪರಿಶೀಲನೆ ನಡೆಸತಕ್ಕದ್ದು, ಕ್ರೋಢೀಕೃತ ಅರ್ಜಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯತಕ್ಕದ್ದು. ಈ ಸಮಿತಿಯಲ್ಲಿ ನಿಯಮಾನುಸಾರ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಕ್ರೋಢೀಕೃತ ವಿವರಗಳೊಂದಿಗೆ ಜವಳಿ ಅಭಿವೃದ್ಧಿ ಆಯುಕ್ತರು ಹಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡುವುದು.

6) ಫಲಾನುಭವಿಗಳು ಹೊಂದಿರಬೇಕಾದ ಕನಿಷ್ಠ ಅರ್ಹತೆಗಳು :

6.1 ಫಲಾನುಭವಿಯು ವೃತ್ತಿನಿರತ/ನೇಯ್ಗೆ ಚಟುವಟಿಕೆಗಳಲ್ಲಿ ಕಾರ್ಯನಿರತರಾಗಿರಬೇಕು.

6.2 ನೇಯ್ಗೆ ಚಟುವಟಿಕೆಗಳಿಂದ ಕನಿಷ್ಠ ಶೇ.50 ವಾರ್ಷಿಕ ಆದಾಯ ಹೊಂದಿರಬೇಕು.

6.3 ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ ಮತ್ತು ಜಿಲ್ಲಾ ವಲಯ ಯೋಜನೆಗಳಡಿ ಯಾವುದೇ ಇಲಾಖೆ ಅಥವಾ ಕಾರ್ಯಕ್ರಮ ಗಳಲ್ಲಿ ವಸತಿ ಸೌಲಭ್ಯವನ್ನು ಈ ಹಿಂದೆ ಪಡೆದಿರಬಾರದು.

6.4 ವಸತಿ ರಹಿತ ನೇಕಾರರಾಗಿರಬೇಕು.

6.5 ಸರ್ಕಾರದ ಯಾವುದೇ ಯೋಜನೆಗಳಡಿ, ಪತಿ ಅಥವಾ ಪತ್ನಿಯ ಹೆಸರಿನಲ್ಲಿ ಇಂತಹ ಸೌಲಭ್ಯ ಪಡೆದಿರಬಾರದು.

6.6 ಒಂದೇ ಕುಟುಂಬದಲ್ಲಿ ವಾಸವಾಗಿರುವ ಸದಸ್ಯರಿಗೆ ಗಂಡ ಅಥವಾ ಹೆಂಡತಿ ಹೆಸರಿನಲ್ಲಿ ಒಂದು ಮನೆಗೆ ಮಾತ್ರ ಈ ಸೌಲಭ್ಯ ಅನ್ವಯಿಸತಕ್ಕದ್ದು.

6.7 ನೇಕಾರಿಕೆ ವೃತ್ತಿ ಅವಲಂಬಿಸಿರುವ ಫಲಾನುಭವಿಯು ಕನಿಷ್ಠ 18 ವರ್ಷ ವಯೋಮಿತಿ ಹೊಂದಿರತಕ್ಕದ್ದು.

7) ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು :

7.1. ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿಗಳು.

7.2. ಇತ್ತೀಚಿನ ಫೋಟೋ/ಭಾವಚಿತ್ರ

7.3. ನಿವೇಶನದ ದಾಖಲಾತಿಗಳು: ಖಾತೆ ಪ್ರತಿ/ಹಕ್ಕು ಪತ್ರ/ ಮಂಜೂರಾತಿ ಪತ್ರ/ನೋಂದಾವಣೆ ಪ್ರತಿ.

7.4. ಸ್ಥಳೀಯ ಪ್ರಾಧಿಕಾರದಿಂದ ಪಡೆದ ಕಟ್ಟಡದ ಲೈಸೆನ್ಸ್/ ಪರವಾಗಿ.

7.5. ಕಟ್ಟಡದ ಅನುಮೋದಿತ ನೀಲಿ ನಕ್ಷೆ ಪ್ರತಿ.

7.6. ಕಟ್ಟಡದ ವಿವರವಾದ ಅಂದಾಜು ವೆಚ್ಚದ ಪಟ್ಟಿ.

7.7. ಸಾಲ ಮಂಜೂರಾತಿ ಪತ್ರದ ಪ್ರತಿ (ಸಾಲ ಪಡೆದಿದ್ದಲ್ಲಿ ಮಾತ್ರ).

7.8. ಸ್ಥಳೀಯ ಪ್ರಾಧಿಕಾರ/ಗ್ರಾಮ ಪಂಚಾಯಿತಿಯಿಂದ ನೀಡಿದ ನಿರಾಪೇಕ್ಷಣಾ ಪತ್ರ.

7.9. ಪ್ರಾಥಮಿಕ ನೇಕಾರರ ಸಹಕಾರ ಸಂಘದ ಸದಸ್ಯರಾಗಿದ್ದಲ್ಲಿ ಸಂಘದ ದೃಢೀಕರಣ/ಠರಾವು ಪತ್ರ.

7.10. ಫಲಾನುಭವಿಯಿಂದ ಕರಾರು/ಒಪ್ಪಿಗೆ ದೃಢೀಕರಣ ಪತ್ರ (ರೂ.15/– ಛಾಪಾ ಕಾಗದದಲ್ಲಿ).

8) ಪ್ರಸ್ತಾವನೆಯನ್ನು ಸಿದ್ಧ ಪಡಿಸುವುದು :

ಯೋಜನೆಯಡಿ ಸೌಲಭ್ಯ ಬಯಸುವ ಅರ್ಹ ಫಲಾನುಭವಿಗಳಿಂದ ಅಥವಾ ಸಂಘ/ಸಂಸ್ಥೆಗಳ ಮೂಲಕ ಚೆಕ್‌ಲಿಸ್ಟ್‌ನಲ್ಲಿ ನಿರ್ದಿಷ್ಟ ಪಡಿಸಿರುವ ದಾಖಲಾತಿಗಳನ್ನು ಪ್ರತಿ ವೈಯಕ್ತಿಕ ಪ್ರಸ್ತಾವನೆಯನ್ನು ಪರಿಶೀಲಿಸಿ, ದಾಖಲಾತಿಗಳ ಪ್ರತಿಯನ್ನು ದೃಢೀಕರಿಸಿ, ಘಟಕ ವೆಚ್ಚ, ಸಹಾಯಧನ, ಸಾಲ ಸೌಲಭ್ಯ, ವಂತಿಕೆಯ ಮೊತ್ತ, ಕಾರ್ಯಚಟುವಟಿಕೆ ಮತ್ತು ಸ್ಥಳ ಪರಿಶೀಲನಾ ವರದಿ ಮುಂತಾದ ವಿವರಗಳನ್ನೊಳಗೊಂಡ ವಿವರಗಳನ್ನು ಪ್ರಸ್ತಾವನೆಯಲ್ಲಿ ದಾಖಲಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಪಷ್ಟ ಅಭಿಪ್ರಾಯದೊಂದಿಗೆ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು.

9) ಅನುಷ್ಠಾನದ ಏಜೆನ್ಸಿ :

ಉಪನಿರ್ದೇಶಕರು ಅಥವಾ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ನೇಕಾರರ ಸಹಕಾರ ಸಂಘಗಳು, ಎನ್‌ಜಿಒ/ಸ್ವಯಂ ಸೇವಾ ಸಂಘ ಸಂಸ್ಥೆಗಳನ್ನು ನಿಗಮ/ಮಂಡಳಿಗಳ ಮೂಲಕ ಹಾಗೂ ಅಸಂಘಟಿತ ವಲಯದ ನೇಕಾರರು/ಫಲಾನುಭವಿಗಳಿಗೆ ನೇರವಾಗಿ ನಿಯಮಗಳನುಸಾರ ಅನುಷ್ಠಾನ ಗೊಳಿಸುವುದು.

10) ಪ್ರಸ್ತಾವನೆ ಮಂಜೂರಾತಿ :

ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ ಗಳಿಂದ ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಯಲ್ಲಿ ಪರಿಶೀಲಿಸಿ ಅನುದಾನದ ಲಭ್ಯತಾನುಸಾರ ಮಂಜೂರಾತಿಗೆ ಪರಿಗಣಿಸುವುದು.

11) ಹಣ ಬಿಡುಗಡೆ :

(ಅ) ಸರ್ಕಾರದಿಂದ ನಿಗದಿಯಾಗಿರುವ ಅನುದಾನದ ಮಿತಿಯಲ್ಲಿ ಮಂಜೂರಾತಿ ಪಡೆದ ಪ್ರಸ್ತಾವನೆಗಳಿಗೆ ರಾಜ್ಯ ಸರ್ಕಾರದ ಸಹಾಯಧನವಾಗಿ ಪ್ರತಿ ಘಟಕಕ್ಕೆ ಗರಿಷ್ಠ ಮಿತಿ ರೂ. 40,000/–ದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ ಬಿಡುಗಡೆ ಮಾಡುವುದು.

(ಆ) ಜಿಲ್ಲಾ ಮಟ್ಟದ ಅಧಿಕಾರಿಗಳು, ಕಟ್ಟಡ ಕಾಮಗಾರಿ ಪ್ರಾರಂಭಿಸುವ ಮುನ್ನ ಫಲಾನುಭವಿಗಳು ಭರಿಸುವ ವಂತಿಕೆ ಹಾಗೂ ಸಹಾಯಧನ ಹಣವನ್ನು ಜಂಟಿ ಖಾತೆಯಲ್ಲಿಡುವುದು ಅಥವಾ ವಂತಿಕೆಯ ಮೊತ್ತದಲ್ಲಿ ಫಲಾನುಭವಿಯು ಕಾಮಗಾರಿಗೆ ತಗುಲುವ ವೆಚ್ಚವಾಗಿ ಮುಂಗಡ ಭರಿಸುವುದು.

(ಇ) ಘಟಕ ವೆಚ್ಚದಲ್ಲಿನ ಮೊತ್ತಕ್ಕಿಂತ ಹೆಚ್ಚುವರಿ ಆಗಬಹುದಾದ ಹಣವನ್ನು ಫಲಾನುಭವಿಯು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವುದು ಅಥವಾ ಸ್ವಂತ ಭರಿಸುವುದು.

(ಈ) ಫಲಾನುಭವಿಯ ವಂತಿಕೆಯ ಮೊತ್ತದಲ್ಲಿ ಪ್ರಾಥಮಿಕ ಕೆಲಸ/ ತಳಪಾಯ ಕಾಮಗಾರಿಗಾಗಿ ಭರಿಸುವುದು.

(ಊ) ವಸತಿ ಕಾರ್ಯಾಗಾರಕ್ಕಾಗಿ ಮಂಜೂರಾದ ಸಾಲ ಹಾಗೂ ಸರ್ಕಾರದ ಸಹಾಯಧನವನ್ನು ಪ್ರಗತಿಯನ್ನಾಧರಿಸಿ 3 ಹಂತಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಣ ಬಿಡುಗಡೆ ಮಾಡುವುದು.

1. ಮೊದಲನೇ ಕಂತು ಸಾಲ	ರೂ.20,000/–
2. ಎರಡನೇ ಕಂತು (ಸಹಾಯಧನ)	ರೂ.20,000/–
3. ಮೂರನೇ ಕಂತು (ಸಹಾಯಧನ)	ರೂ.20,000/–

(ಋ) ಅಂತಿಮ ಕಂತು ಸಹಾಯಧನ ಬಿಡುಗಡೆಗೆ ಮೊದಲು ಫೋಟೋ ದಾಖಲೀಕರಣ ಮತ್ತು ಕಾಮಗಾರಿ ಬಿಲ್ಲಿನ ವಿವರಗಳನ್ನು ಪಡೆದು ಮಾತ್ರ ಬಿಡುಗಡೆ ಮಾಡತಕ್ಕದ್ದು.

12) ಕಟ್ಟಡ ರಚನೆಯ ವಿವರಣೆ :

I. ಫಲಾನುಭವಿಯು ನಿರ್ಮಿಸಲ್ಪಡುವ ವಸತಿ ಕಾರ್ಯಾಗಾರದ ಕನಿಷ್ಠ ವಿಸ್ತೀರ್ಣ 400 ಚ.ಅ ಇರತಕ್ಕದ್ದು.

II. ವಾಸಿಸಲು ಕನಿಷ್ಠ ಸ್ಥಳ 'ಅಡುಗೆ ಕೋಣೆ, ಶೌಚಾಲಯ, ಸ್ನಾನ ಕೊಣೆಗಳನ್ನು ಹೊಂದಿರತಕ್ಕದ್ದು. ಕನಿಷ್ಠ ಉತ್ತಮ ಬೆಳಕಿನ ವ್ಯವಸ್ಥೆ ಹೊಂದಿರಬೇಕು.

III. ಕಟ್ಟಡ ಕಾಮಗಾರಿಗೆ ಬೇಕಾದ ಕಟ್ಟಡ ಸಾಮಗ್ರಿಗಳನ್ನು ಒದಗಿಸಿ, ತನ್ನ ಶ್ರಮದಿಂದ ಲಿಂಟಲ್ ಹಂತದವರೆಗೆ ತಗಲುವ ವೆಚ್ಚವನ್ನು ಫಲಾನುಭವಿಯು ಘಟಕ ವೆಚ್ಚದಲ್ಲಿನ ಹೆಚ್ಚುವರಿ ಮೊತ್ತವನ್ನಾಗಿ ಭರಿಸುವುದು.

IV. ನಿರ್ಮಿತ ಕಟ್ಟಡಕ್ಕೆ ನಕಾಶೆಯಂತೆ ನೈರ್ಮಲ್ಯ, ಕೊಳಚೆ ನೀರು/ತ್ಯಾಜ್ಯ ವಸ್ತುಗಳ ವಿಸರ್ಜನೆಗೆ ವಾತಾವರಣ ಇರತಕ್ಕದ್ದು.

V. ಕಟ್ಟಡದ ಗುಣಮಟ್ಟವನ್ನು ಉತ್ತಮವಾಗಿರುವಂತೆ ಕಾಯ್ದು ಕೊಳ್ಳುವುದು.

13) ಮಾನಿಟರಿಂಗ್ :

ಯೋಜನೆಯ ಸಮರ್ಪಕ ಅನುಷ್ಠಾನದ ಉಸ್ತುವಾರಿ, ಮೇಲ್ವಿಚಾರಣೆ ಕ್ಷೇತ್ರ ಮಟ್ಟದ ಭೌತಿಕ ಪ್ರಗತಿ ಮತ್ತು ಕಾಮಗಾರಿಗಳನ್ನು ಜಂಟಿ ನಿರ್ದೇಶಕರು (ಕೈಮಗ್ಗ ಮತ್ತು ಜವಳಿ) ರವರ ಅಧ್ಯಕ್ಷತೆಯ ಸಮಿತಿಯು ನಿರ್ವಹಿಸುವುದು.

14) ನಿಬಂಧನೆಗಳು :

I. ಸರ್ಕಾರದಿಂದ ಪಡೆದ ಆರ್ಥಿಕ ಸೌಲಭ್ಯದಿಂದ ನಿರ್ಮಿಸಿದ ಕಟ್ಟಡದಲ್ಲಿ ನಿರಂತರವಾಗಿ ನೇಯ್ಗೆ ವೃತ್ತಿಯನ್ನು ಮುಂದುವರಿಸುವುದು ಹಾಗೂ ಇದರಿಂದ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಅವಕಾಶ ಹೊಂದುವುದು.

II. ಬಿಡುಗಡೆ ಮಾಡಿದ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆಗೊಳಿಸಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು.

III. ಅನುದಾನದಿಂದ ನಿರ್ಮಿಸಿದ ಕಟ್ಟಡವನ್ನು ಇತರೆ ಯಾವುದೇ ವ್ಯಕ್ತಿಗೆ ಉಪಬಾಡಿಗೆ/ಲೀಸ್‌ಗೆ ನೀಡಬಾರದು ಅಥವಾ ಮುಂದಿನ 10 ವರ್ಷಗಳ ಅವಧಿಗೆ ಇಲಾಖೆಯ ಪೂರ್ವಾನುಮತಿ ಇಲ್ಲದೆ ಪರಬಾರೆ ಮಾಡಬಾರದು.

IV. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶ. ನಿಯಮಗಳಿಗೆ ಬದ್ಧವಾಗಿರಬೇಕು.

V. ಕಟ್ಟಡದ ಗೋಡೆಯ ಮುಂದಿನ ಭಾಗದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಆರ್ಥಿಕ ನೆರವಿನಿಂದ ನಿರ್ಮಿಸಲಾದ ಕಟ್ಟಡವೆಂದು ನಾಮಫಲಕವನ್ನು ಕಡ್ಡಾಯವಾಗಿ ಬರೆಸತಕ್ಕದ್ದು.

VI. ಕಟ್ಟಡ ಕಾಮಗಾರಿ ಪೂರ್ಣಗೊಳಿಸಿರುವ ಬಗ್ಗೆ ಅಧಿಕೃತ ಇಂಜಿನಿಯರ್‌ರವರಿಂದ ಕಂಪ್ಲೀಷನ್ ಸರ್ಟಿಫಿಕೇಟ್ ಹಾಗೂ ಫೋಟೋ ದಾಖಲೀಕರಣವನ್ನು ಇಲಾಖೆಗೆ ನೀಡತಕ್ಕದ್ದು.

VII. ಫಲಾನುಭವಿಗೆ ವಸತಿ ಕಾರ್ಯಾಗಾರವನ್ನು ಅಧಿಕೃತವಾಗಿ ಹಂಚಿಕೆ ಮಾಡಿ, ಉತ್ತಮ ವಾತಾವರಣದಲ್ಲಿ ನೇಯ್ಗೆ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸುವುದು.

VIII. ಹಣ ಬಳಕೆ ಪ್ರಮಾಣ ಪತ್ರವನ್ನು ಪ್ರತಿ ಬಿಡುಗಡೆಯಾದ ವೆಚ್ಚಕ್ಕೆ ದೃಢೀಕರಿಸಿ ಕಡ್ಡಾಯವಾಗಿ ಸಲ್ಲಿಸಬೇಕು.

IX. ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಉತ್ತೇಜನ/ ಪ್ರೋತ್ಸಾಹಿಸುವುದು.

X. ನಿರ್ಮಾಣ ಹಂತದಲ್ಲಿ ಫಲಾನುಭವಿ ಆಕಸ್ಮಿಕವಾಗಿ / ಸ್ವಾಭಾವಿಕವಾಗಿ ಮರಣ ಹೊಂದಿದಲ್ಲಿ ಈ ಸೌಲಭ್ಯವನ್ನು ಕಾನೂನು ರೀತ್ಯ ಹಕ್ಕುಳ್ಳ ಫಲಾನುಭವಿಯ ವಾರಸುದಾರರಿಗೆ ವರ್ಗಾಯಿಸಲು ಅವಕಾಶ ಕಲ್ಪಿಸುವುದು.

XI. ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ನಿಯಮಾನುಸಾರ ಒಟ್ಟಾರೆ ಭೌತಿಕ ಗುರಿಯಲ್ಲಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಕನಿಷ್ಠ ಶೇ. 16.20 ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ. 6.55 ರಷ್ಟು ಮನೆಗಳನ್ನು ಮೀಸಲಿರಿಸತಕ್ಕದ್ದು ಹಾಗೂ ಅದರನ್ವಯ ಆಯ್ಕೆ ಮಾಡತಕ್ಕದ್ದು.

XII. ವಸತಿ ಕಾರ್ಯಾಗಾರ ಯೋಜನೆಯಡಿ ಕೇಂದ್ರ ವಲಯ, ರಾಜ್ಯವಲಯ ಅಥವಾ ಜಿಲ್ಲಾವಲಯ ಯೋಜನೆಯಡಿ ವಸತಿ ಸೌಲಭ್ಯ ಪಡೆಯುವ ಪ್ರತಿ ಫಲಾನುಭವಿಯು ತನ್ನ ಮನೆಯಲ್ಲಿ ಕನಿಷ್ಠ ಒಂದು ಕೈಮಗ್ಗವನ್ನು ಎರಡು ವಿದ್ಯುತ್ ಮಗ್ಗಗಳನ್ನು ಅಳವಡಿಸಿಕೊಂಡು ವೃತ್ತಿ ಮುಂದುವರಿಸುವುದು.

XIII. ಸರ್ಕಾರದ ವಿವಿಧ ಯೋಜನೆಗಳಡಿ ತರಬೇತಿ ಹೊಂದಿ ಸುಧಾರಿತ ಮಗ್ಗ ಮತ್ತು ಸಲಕರಣೆಗಳನ್ನು ಪಡೆದ ಫಲಾನುಭವಿ ಗಳಿಗೆ ಆದ್ಯತೆ ನೀಡುವುದು.

XIV. ಇತರೆ ಫಲಾನುಭವಿಗಳಿಗೆ ಸರ್ಕಾರದ ಶೇ.3ರ ಬಡ್ಡಿ ದರದ ಯೋಜನೆಯಡಿಯಲ್ಲಿ ತನ್ನ ಕಸುಬನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ ಸುಧಾರಿತ ಮಗ್ಗಗಳನ್ನು ಯೋಜನೆಯ ಒಂದು ಅಂಗವಾಗಿ ಸಾಲ ಮಂಜೂರಾತಿ ಪಡೆಯುವುದು.

15) ಮೌಲ್ಯಮಾಪನ :

I. ವಸತಿ ಕಾರ್ಯಾಗಾರ ಸೌಲಭ್ಯ ಪಡೆದ ಪ್ರತಿ ಫಲಾನುಭವಿಯ ಪೂರ್ಣ ವಿವರಗಳನ್ನು ಜಿಲ್ಲಾ ಮಟ್ಟದ ಕಛೇರಿಯಲ್ಲಿ ದಾಖಲಾತಿಯಾಗಿ ನಿರ್ವಹಿಸುವುದು.

II. ಕಟ್ಟಡ ಕಾಮಗಾರಿಯ ಬಳಕೆ ಹಾಗೂ ಅದರಿಂದ ಆಗಿರುವ ಪರಿಣಾಮಗಳ ಬದಲಾವಣೆಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ವರದಿ ಮಾಡುವುದು.

III. ಕಾಮಗಾರಿ ಪೂರ್ಣಗೊಳ್ಳುವವರೆಗೆ ಕ್ಷೇತ್ರ ಮಟ್ಟದಲ್ಲಿ ಕಾಲಕಾಲಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನಾ ಪ್ರಗತಿಯ ಹಂತ ಹಣ ಉಪಯುಕ್ತತೆ ಬಗ್ಗೆ ಪರಿಶೀಲನೆ ನಡೆಸುವುದು.

IV. ಪ್ರತಿ ತ್ರೈಮಾಸಿಕ ಅವಧಿಗೆ ಪ್ರಗತಿ ವರದಿಯನ್ನು ಸಲ್ಲಿಸುವುದು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2010–11ನೇ ಸಾಲಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತಕ್ಕೆ ಮಂಜೂರಾಗಿರುವ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೂ.10.00 ಕೋಟಿಗಳ ಅನುದಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1. ಮಾನ್ಯ ಮುಖ್ಯಮಂತ್ರಿಗಳವರ ಆಯವ್ಯಯ ಭಾಷಣ.

2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಬೆಂಗಳೂರು ಇವರ ಪತ್ರ ಸಂಖ್ಯೆ: ಕೈಜಇ/ಕೈಮಗ್ಗ/ಜತ–1/ಕಕೈಅನಿ/ನೇವಿಪ್ಯಾ /11/10/11 ದಿ: 28–05–2010.

ಪ್ರಸ್ತಾವನೆ :

2010–11ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡಂತೆ ಘೋಷಿಸಿರುತ್ತಾರೆ.

"ಕೈಮಗ್ಗ ನೇಕಾರರು ತಮ್ಮ ವೃತ್ತಿಯಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ಶ್ರಮಿಸುತ್ತಿದೆ. ಈ ನಿಗಮದ ದುಡಿಯುವ ಬಂಡವಾಳವನ್ನು ಹೆಚ್ಚಿಸಲು ರೂ.10 ಕೋಟಿ ಒದಗಿಸಲಾಗುವುದು".

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ, ಬೆಂಗಳೂರು ಇವರು ಮೇಲೆ (2) ರಲ್ಲಿ ಒದಲಾದ ತಮ್ಮ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತ ಇವರ ದಿ: 14–05–2010ರ ಪತ್ರವನ್ನು ಲಗತ್ತಿಸಿ, ಅವರು ಕೋರಿರುವಂತೆ 2010–11ನೇ ಸಾಲಿನ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಶಿಫಾರಸ್ಸು ಮಾಡಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು, ಕೆ.ಹೆಚ್.ಡಿ.ಸಿ.ರವರು ತಮ್ಮ ಪತ್ರದಲ್ಲಿ ಮೇಲ್ಕಂಡ ಹಣವನ್ನು ಬಂಡವಾಳ ಹೂಡಿಕೆಗಳು ಎಂಬ ಲೆಕ್ಕ ಶೀರ್ಷಿಕೆಯಡಿ ಹಂಚಿಕೆ ಮಾಡಿರುವುದರಿಂದ ಈ ಮೊತ್ತವು ವರಮಾನ ಬರುವಂತಹ ನೇಕಾರ ಕಲ್ಯಾಣ ಕಾರ್ಯಕ್ರಮಗಳಿಗೆ ನೇರವಾಗಿ ಉಪಯೋಗಿಸಲು ಸಾಧ್ಯವಿಲ್ಲದೆ ಇರುವುದರಿಂದ ಇದನ್ನು ಈ ಕೆಳಕಂಡ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಉಪಯೋಗಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಈ ವಿಷಯವನ್ನು ದಿನಾಂಕ: 18–08–2010ರಂದು ಮಾನ್ಯ ಜವಳಿ, ಯುವಜನಸೇವೆ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ್ದು, ಆಯವ್ಯಯದಲ್ಲಿ ಒದಗಿಸಿರುವ ರೂ.10.00 ಕೋಟಿಗಳ ಅನುದಾನವನ್ನು ಪ್ರಸ್ತಾಪಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಉಪಯೋಗಿಸಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾರ್ಯಕ್ರಮಗಳು	ಹಣ ಹಂಚಿಕೆ
1	ಪ್ರಿಯದರ್ಶಿನಿ ಬಟ್ಟೆ ಸಂಸ್ಕರಣ ಘಟಕದ ಆಧುನೀಕರಣ (ರೂ.418.00 ಲಕ್ಷ) ಹಾಗೂ ಯೋಜನಾ ಕೇಂದ್ರಗಳಲ್ಲಿರುವ ಬಣ್ಣದ ಮನೆಗಳ ಆಧುನೀಕರಣ ರೂ.42.00 ಲಕ್ಷ	460.00
2	ಕೈಮಗ್ಗ ಬಟ್ಟೆ ಮಾರಾಟ ಮೊಬೈಲ್ ವಾಹನ ಮತ್ತು ವಿದ್ಯಾ ವಿಕಾಸ ಯೋಜನೆ ಹಾಗೂ ದುರ್ಬಲ ವರ್ಗದವರಿಗೆ ಸೀರೆ ಪಂಚೆ ವಿತರಣೆ ಯೋಜನೆಯಡಿ ಬೇಕಾಗುವ ವಾಹನ ಖರೀದಿ	60.00
3	ಹೊಸ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಇಂಟಿರೀಯರ್ ಡೆಕೋರೇಷನ್, ಹಾಲಿ ಇರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ನವೀಕರಣ, ಕಛೇರಿ ಮತ್ತು ದಾಸ್ತಾನು ಮಳಿಗೆಗಳ ನವೀಕರಣ.	200.00
4	ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ, ದಾಸ್ತಾನು ಮಳಿಗೆ, ಮಾರಾಟ-ಮಳಿಗೆ, ಸಂಸ್ಕರಣ ಘಟಕಗಳು, ಉಪಕೇಂದ್ರ ಹಾಗೂ ಉತ್ಪಾದನಾ ಯೋಜನಾ ಕೇಂದ್ರಗಳ ಗಣಕೀಕರಣಕ್ಕಾಗಿ.	100.00
5	ನ್ಯೂಮ್ಯಾಟಿಕ್ ವ್ಯವಸ್ಥೆಯನ್ನು ಅವಶ್ಯವಿರುವ ಮಗ್ಗಗಳಿಗೆ ಮತ್ತು ಸಾಮೂಹಿಕ ನೇಯ್ಗೆ ಕೇಂದ್ರ ಗಳಲ್ಲಿ ಅಳವಡಿಸಲು ಮತ್ತು ಚಾಲ್ತಿಯಲ್ಲಿರುವ ಮಗ್ಗಗಳ ಆಧುನೀಕರಣ.	25.00
6	ಉತ್ಪಾದನಾ/ಸಾಮೂಹಿಕ ನೇಯ್ಗೆ ಕೇಂದ್ರಗಳಲ್ಲಿ ಕ್ಯಾಡ್ ಕ್ಯಾಮ್ ವ್ಯವಸ್ಥೆಯನ್ನು ಅಳವಡಿಸಲು.	20.00
7	ನೇಕಾರರ ವಿವಿಧೋದ್ದೇಶ ಉಪಯೋಗಿ ಸಂಕೀರ್ಣ.	135.00
	ಒಟ್ಟು :	**1000.00**

ಪ್ರಸ್ತಾವನೆಯ ಸೂಕ್ತ ಪರಿಶೀಲನೆಯ ತರುವಾಯ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 19 ಜಕೈಯೋ 2010 ಬೆಂಗಳೂರು ದಿ: 04-01-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತವು ಈ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾರ್ಯಕ್ರಮಗಳು	ಹಣ ಹಂಚಿಕೆ
1	ಪ್ರಿಯದರ್ಶಿನಿ ಬಟ್ಟೆ ಸಂಸ್ಕರಣ ಘಟಕದ ಆಧುನೀಕರಣ (ರೂ.418.00 ಲಕ್ಷ) ಹಾಗೂ ಯೋಜನಾ ಕೇಂದ್ರಗಳಲ್ಲಿರುವ ಬಣ್ಣದ ಮನೆಗಳ ಆಧುನೀಕರಣ ರೂ.42.00 ಲಕ್ಷ	460.00
2	ಕೈಮಗ್ಗ ಬಟ್ಟೆ ಮಾರಾಟ ಮೊಬೈಲ್ ವಾಹನ ಮತ್ತು ವಿದ್ಯಾ ವಿಕಾಸ ಯೋಜನೆ ಹಾಗೂ ದುರ್ಬಲ ವರ್ಗದವರಿಗೆ ಸೀರೆ ಪಂಚೆ ವಿತರಣೆ ಯೋಜನೆಯಡಿ ಬೇಕಾಗುವ ವಾಹನ ಖರೀದಿ	60.00
3	ಹೊಸ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ಇಂಟಿರೀಯರ್ ಡೆಕೋರೇಷನ್, ಹಾಲಿ ಇರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳ ನವೀಕರಣ, ಕಛೇರಿ ಮತ್ತು ದಾಸ್ತಾನು ಮಳಿಗೆಗಳ ನವೀಕರಣ.	200.00
4	ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ, ದಾಸ್ತಾನು ಮಳಿಗೆ, ಮಾರಾಟ-ಮಳಿಗೆ, ಸಂಸ್ಕರಣ ಘಟಕಗಳು, ಉಪಕೇಂದ್ರ ಹಾಗೂ ಉತ್ಪಾದನಾ ಯೋಜನಾ ಕೇಂದ್ರಗಳ ಗಣಕೀಕರಣಕ್ಕಾಗಿ.	100.00

5	ನ್ಯೂಮ್ಯಾಟಿಕ್ ವ್ಯವಸ್ಥೆಯನ್ನು ಅವಶ್ಯವಿರುವ ಮಗ್ಗಗಳಿಗೆ ಮತ್ತು ಸಾಮೂಹಿಕ ನೇಯ್ಗೆ ಕೇಂದ್ರ ಗಳಲ್ಲಿ ಅಳವಡಿಸಲು ಮತ್ತು ಚಾಲ್ತಿಯಲ್ಲಿರುವ ಮಗ್ಗಗಳ ಆಧುನೀಕರಣ.	25.00
6	ಉತ್ಪಾದನಾ/ಸಾಮೂಹಿಕ ನೇಯ್ಗೆ ಕೇಂದ್ರಗಳಲ್ಲಿ ಕ್ಯಾಡ್ ಕ್ಯಾಮ್ ವ್ಯವಸ್ಥೆಯನ್ನು ಅಳವಡಿಸಲು.	20.00
	ಒಟ್ಟು :	**865.00**

ಇದಕ್ಕಾಗಿ 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4851-00-103-1-01-211 (ಬಂಡವಾಳ ಹೂಡಿಕೆಗಳು) ಅಡಿ ರೂ.4.00 ಕೋಟಿ (ರೂಪಾಯಿ ನಾಲ್ಕು ಕೋಟಿಗಳು ಮಾತ್ರ) ಗಳ ಅನುದಾನವನ್ನು ಈಕ್ವಿಟಿಯಾಗಿ ಬಿಡುಗಡೆ ಮಾಡಲಾಗಿದೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆರವರ ಮೇಲುರುಜುವಿನೊಂದಿಗೆ ಖಜಾನೆಯಿಂದ ಹಣ ಪಡೆಯಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತ, ಇವರಿಗೆ ಅಧಿಕಾರ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿಗಳ ಸಂಖ್ಯೆ: ಆಇ 1902 ವೆಚ್ಚ-1/2010 ದಿ:04-12-2010 ಹಾಗೂ ಸಂಖ್ಯೆ:ಆಇ/2092/ವೆಚ್ಚ-1/2010 ದಿ:30-12-2010ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಗಣಪತಿ
ಸರ್ಕಾರದ ಉಪ ಕಾರ್ಯದರ್ಶಿ
(ಸಿ & ಸಿ ಮತ್ತು ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2010–11ನೇ ಸಾಲಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಹುಬ್ಬಳ್ಳಿಯಲ್ಲಿ ನೇಕಾರರ ಭವನವನ್ನು ನಿರ್ಮಿಸಲು ರೂ.3.00 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1. 2010–11ನೇ ಸಾಲಿನ ಆಯವ್ಯಯ ಭಾಷಣ.

2. ಜವಳಿ ಅಭಿವೃದ್ಧಿ ಆಯುಕ್ತರವರ ಪತ್ರ ಸಂಖ್ಯೆ: ಕೈಜ ಇ/ಜತ–1/ಕಕೈಅನಿನೇವಿಪ್ಯಾ/11/10–11 ದಿ:28–05–2010.

3. ಮಾನ್ಯ ಜವಳಿ, ಯುವಜನಸೇವೆ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ದಿ: 18–08–2010.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನೇಕಾರ ಭವನವನ್ನು ನಿರ್ಮಿಸಲು ಉದ್ದೇಶಿಸಿದ್ದು, ಮೇಲೆ (1)ರಲ್ಲಿ ಓದಲಾದ 2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರೂ.3.00 ಕೋಟಿ ಅನುದಾನವನ್ನು ನೀಡಲು ಘೋಷಣೆಯಾಗಿದೆ. ಅದರಂತೆ, ಮೇಲೆ (2)ರಲ್ಲಿ ಓದಲಾದ ಜವಳಿ ಅಭಿವೃದ್ಧಿ ಆಯುಕ್ತರವರ ಪತ್ರದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತಕ್ಕೆ ಆಯವ್ಯಯದ ಲೆಕ್ಕ ಶೀರ್ಷಿಕೆ 4851–00–103–1–11–386(ನೇಕಾರರ ಭವನ ನಿರ್ಮಾಣಕ್ಕಾಗಿ) ರಡಿ ನೇಕಾರ ಭವನ ನಿರ್ಮಾಣ ಮಾಡಲು ಆಯೋಜಿಸಿರುವ ರೂ.3.00 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಈ ಬಗ್ಗೆ (3)ರಲ್ಲಿ ಮೇಲೆ ಓದಲಾದ ಸಭೆಯ ನಡವಳಿಯಲ್ಲಿ ನಿಗಮದ ಸ್ವಂತ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಹಾಗೂ ಹುಬ್ಬಳ್ಳಿಯಲ್ಲಿ ಈಗಿರುವ ಬಾಡಿಗೆ ಕಟ್ಟಡವನ್ನು ತೆರವುಗೊಳಿಸಿ, ಕಛೇರಿಯನ್ನು ಸ್ವಂತ ಕಟ್ಟಡದಲ್ಲಿಯೇ ಕಾರ್ಯ ನಿರ್ವಹಿಸಲು 32,000 ಚದರಡಿ ವಿಸ್ತೀರ್ಣದ ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡಲು ರೂ.3.00 ಕೋಟಿಗಳನ್ನು ಬಿಡುಗಡೆ ಮಾಡಲು ತಿಳಿಸಿರುತ್ತಾರೆ.

ಅದರಂತೆ, ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ವಾಕೈ 19 ಜಕೈಯೋ 2010 ಬೆಂಗಳೂರು ದಿನಾಂಕ: 01–09–2010.

2010–11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4851–00–103–1–11–386 (ನೇಕಾರರ ಭವನ ನಿರ್ಮಾಣಕ್ಕಾಗಿ)ರಡಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತಕ್ಕೆ ಮಂಜೂರಾಗಿರುವ ಹೊಸ ಯೋಜನೆಗಳಾದ ನೇಕಾರರ ಭವನ ಹಾಗೂ ಹುಬ್ಬಳ್ಳಿಯಲ್ಲಿ ಕಛೇರಿ ಕಟ್ಟಡ ಸೇರಿ, ಒಟ್ಟು 32,000 ಚದರಡಿ ನಿರ್ಮಾಣ ಮಾಡಲು ಆಯವ್ಯಯದಲ್ಲಿ ನೀಡಿರುವ ರೂ.300.00 ಲಕ್ಷಗಳ ಅನುದಾನಕ್ಕೆ ಆಡಳಿತಾತ್ಮಕ ಮಂಜೂರಾತಿ ಯನ್ನು ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 770 (ವೆಚ್ಚ–1)/2010 ದಿನಾಂಕ: 15–05–2010 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 14 ಎಫ್‌ಆರ್‌ಒ 2010 ದಿ:23–06–2010ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಆರ್ ಅನಂತರಾಮು
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕೈಮಗ್ಗ ಮತ್ತು ಜವಳಿ ಇಲಾಖೆಗೆ ಸಂಬಂಧಿಸಿದಂತೆ, 2010–11ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳಿಗೆ ನೇಕಾರರ ವಿಶೇಷ ಪ್ಯಾಕೇಜ್‌ನ ವಿವಿಧ ಕಾಂಪೊನೆಂಟ್‌ಗಳಿಗೆ ನಿಗದಿತ ಹಂಚಿಕೆ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ:ವಾಕೈ 52 ಆಂಆಸ (1) 2010 ಬೆಂಗಳೂರು ದಿ: 10–04–2010.

2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ, ಬೆಂಗಳೂರು ಇವರ ಪ್ರಸ್ತಾವನೆ ಸಂಕ್ಯೆ:ಕೈಜ ಇ/ಅಂಅಂ/ ಬಂ/2010–11 ದಿ: 17–04–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ 2010–11ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯ ಕ್ರಮಗಳ ಅನುಷ್ಠಾನಕ್ಕೆ ಅನುದಾನವನ್ನು ನಿಗದಿಪಡಿಸಲಾಗಿದೆ. ಸದರಿ ಆದೇಶದಲ್ಲಿ ಕೈಮಗ್ಗ ಸಹಕಾರ ಸಂಘಗಳಿಗೆ ಸಹಯ ಲೆಕ್ಕ ಶೀರ್ಷಿಕೆ 2851–00–103–0–61ರಡಿ ರೂ.55.00 ಲಕ್ಷ, ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ ಲೆಕ್ಕ ಶೀರ್ಷಿಕೆ 2851–00–103–0–62ರಡಿ ರೂ.2593.00 ಲಕ್ಷ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತ– ನೇಕಾರರ ವಿಶೇಷ ಪ್ಯಾಕೇಜ್‌ನ ಲೆಕ್ಕ ಶೀರ್ಷಿಕೆ 2851–00–103–0–69ರಡಿ ರೂ.513.00 ಲಕ್ಷ ಹಾಗೂ ಸಿದ್ಧ ಉಡುಪು ನೀತಿಯ ಲೆಕ್ಕ ಶೀರ್ಷಿಕೆ 2852–08–202–7–01 ರಡಿ ರೂ.6000.00 ಲಕ್ಷಗಳಿಗೆ ಸಂಬಂಧಿಸಿದಂತೆ ಸದರಿ ಯೋಜನೆಯ ವಿವಿಧ ಕಾಂಪೊನೆಂಟ್‌ಗಳಿಗೆ ನಿಗದಿತ ಹಂಚಿಕೆ ಮಾಡಲು ಮೇಲೆ ಓದಲಾದ ಕ್ರಮ ಸಂಖ್ಯೆ(2) ರಲ್ಲಿ) ಜವಳಿ, ಅಭಿವೃದ್ಧಿ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 20 ಜಕೈಯೋ 2010 ಬೆಂಗಳೂರು, ದಿನಾಂಕ: 28–08–2010.

2010–11ನೇ ಸಾಲಿಗೆ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ ಲೆಕ್ಕ ಶೀರ್ಷಿಕೆ 2851–00–103–0–61ರಡಿ ರೂ.55.00 ಲಕ್ಷ, ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ ಲೆಕ್ಕ ಶೀರ್ಷಿಕೆ 2851–00–103–0–62ರಡಿ ರೂ.2593.00 ಲಕ್ಷ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನಿಯಮಿತ–ನೇಕಾರರ ವಿಶೇಷ ಪ್ಯಾಕೇಜ್‌ನ ಲೆಕ್ಕ ಶೀರ್ಷಿಕೆ 2851–00–103–0–69 ರಡಿ ರೂ.513.00 ಲಕ್ಷ ಹಾಗೂ ಸಿದ್ಧ ಉಡುಪು ನೀತಿಯ ಲೆಕ್ಕ ಶೀರ್ಷಿಕೆ 2852–08–202–7–01ರಡಿ ರೂ.6000.00 ಲಕ್ಷಗಳ ಅನುದಾನವನ್ನು ಈ ಕೆಳಗೆ ಸೂಚಿಸಿರುವ ಯೋಜನಾ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿದೆ.

1. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ:(2851–00–103–0–61)
ಒಟ್ಟು ಆಯವ್ಯಯ: ರೂ.55.00 ಲಕ್ಷಗಳು.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಉಪಯೋಜನೆಗಳು	(ರೂ.ಲಕ್ಷಗಳಲ್ಲಿ)
1	ನಬಾರ್ಡ್ ಪುನರ್ಧನ ಯೋಜನೆಯಡಿ ದುಡಿಮೆ ಬಂಡವಾಳ ಸಾಲ ಪಡೆದ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಬಡ್ಡಿ ಸಹಾಯಧನ	09.00
2	ನೇಕಾರರ ಕಲ್ಯಾಣ ಯೋಜನೆ	25.00
3	ಹೊಸ ವಿನ್ಯಾಸ ಮತ್ತು ಪ್ರವೃತ್ತಿ	3.00
4	ಕೈಮಗ್ಗ ನೇಕಾರರಿಗೆ ತರಬೇತಿ	2.00
5	ಕೈಮಗ್ಗ ನೇಕಾರರಿಗೆ ಪ್ರಶಸ್ತಿಗಳು	6.00
6	ರಾಜ್ಯ ಮಟ್ಟದ ಕೈಮಗ್ಗ ವಸ್ತು ಪ್ರದರ್ಶನ	10.00
	ಒಟ್ಟು:	**55.00**

2. ನೇಕಾರರ ವಿಶೇಷ ಪ್ಯಾಕೇಜ್ (2851–00–103–6–62)
ಒಟ್ಟು ಆಯವ್ಯಯ ರೂ.2593.00 ಲಕ್ಷಗಳು

ಈ ಯೋಜನೆಯ ಉಪಯೋಜನೆಗಳನ್ನು ಈ ಕೆಳಗೆ ನಮೂದಿಸಿದೆ:
ಅ: ಇತರೆ ಖರ್ಚು ಆಯವ್ಯಯ: ರೂ.2593.00 ಲಕ್ಷಗಳು.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಉಪಯೋಜನೆಗಳು	ಆಯವ್ಯಯ
1	20 ಹೆಚ್.ಪಿ.ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್ ಮಗ್ಗ ಘಟಕಗಳಿಗೆ (ಮಗ್ಗಪೂರ್ವ ಸೌಲಭ್ಯಗಳೂ ಸೇರಿದಂತೆ) ವಿದ್ಯುತ್ ದರ ರಿಯಾಯಿತಿ ಸಹಾಯಧನ	2209.00
2	ಕರ್ನಾಟಕ ಕೈಮಗ್ಗ ತರಬೇತಿ ಸಂಸ್ಥೆ ಗದಗ ಮತ್ತು ಅಡ್ವಾನ್ಸ್‌ಡ್ ತರಬೇತಿ ಸಂಸ್ಥೆ ಜಮಖಂಡಿ ಸಂಸ್ಥೆಗಳಿಗೆ ಆವರ್ತಕ ವೆಚ್ಚ ಭರಿಸುವುದು.	30.00
3	ನೇಕಾರರಿಗೆ ಶೇ.3ರ ದರದಲ್ಲಿ ಸಾಲ ನೀಡುವ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಸಂಘಗಳಿಗೆ ಬಡ್ಡಿ ಸಹಾಯಧನ.	50.00
4	ಕೈಮಗ್ಗ ನೇಕಾರರ ಮಿತವ್ಯಯನಿಧಿ ಯೋಜನೆಯಡಿ ಬಡ್ಡಿ.	100.00
5	ಕರ್ನಾಟಕ ಕೈಮಗ್ಗ ತರಬೇತಿ ಸಂಸ್ಥೆ, ಗದಗ್ ಸಂಸ್ಥೆಯ ಮೂಲಭೂತ ಸೌಕರ್ಯ ಅಭಿವೃದ್ಧಿ.	44.00
6	ಬಳ್ಳಾರಿ ಸಿದ್ಧ–ಉಡುಪು ತರಬೇತಿ ಸಂಸ್ಥೆಗೆ ಆವರ್ತನಾ ವೆಚ್ಚ.	10.00
	ಹೊಸ ಕಾಂಪೊನೆಂಟ್‌ಗಳು	
7	2010–11ನೇ ಸಾಲಿನ ಆಯವ್ಯಯ ಭಾಷಣ ದಲ್ಲಿ ಘೋಷಿಸಿರುವಂತೆ ನೇಕಾರರಿಗೆ ನ್ಯೂಮ್ಯಾಟಿಕ್ ಮಗ್ಗ ಒದಗಿಸಲು (ಹೊಸ ಯೋಜನೆ) (ಈ ಯೋಜನೆಯಡಿ ಪ್ರತಿ	100.00

	ಫಲಾನುಭವಿಗೆ ನೀಡತಕ್ಕ ಸಹಾಯಧನವನ್ನು ನ್ಯೂಮ್ಯಾಟಿಕ್ ಮಗ್ಗದ ಬೆಲೆಯ ಶೇ.25ರಷ್ಟು ಮೀರದಂತೆ ನೋಡಿಕೊಳ್ಳತಕ್ಕದ್ದು.)	.
8	2010–11ನೇ ಸಾಲಿನ ಆಯವ್ಯಯ ಭಾಷಣ ದಲ್ಲಿ ಘೋಷಿಸಿರುವಂತೆ ನೇಕಾರರಿಗೆ ಸೋಲಾರ್ ದೀಪ ಒದಗಿಸಲು (ಹೊಸ ಯೋಜನೆ) (ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ನೀಡತಕ್ಕ ಸಹಾಯಧನವನ್ನು ಸೋಲಾರ್ ದೀಪದ ಬೆಲೆಯ ಶೇ.25ರಷ್ಟು ಮೀರದಂತೆ ನೋಡಿ ಕೊಳ್ಳತಕ್ಕದ್ದು.)	50.00
	ಒಟ್ಟು :	**2593.00**

3. ನೇಕಾರರ ವಿಶೇಷ ಪ್ಯಾಕೇಜ್–ಕೆ.ಹೆಚ್.ಡಿಸಿ(2851–00–103–0–69)
ಒಟ್ಟು ಆಯವ್ಯಯ ರೂ:513.00 ಲಕ್ಷಗಳು.

ಈ ಯೋಜನೆಯ ಉಪಯೋಜನೆಗಳನ್ನು ಈ ಕೆಳಗೆ ನಮೂದಿಸಿದೆ:
ಅ: ಇತರೆ ಖರ್ಚು ಆಯವ್ಯಯ: ರೂ.513.00 ಲಕ್ಷಗಳು.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಉಪಯೋಜನೆಗಳು	ಆಯವ್ಯಯ
1	ವಾಣಿಜ್ಯ ಬ್ಯಾಂಕುಗಳಿಂದ ದುಡಿಮೆ ಬಂಡವಾಳಕ್ಕಾಗಿ ಪಡೆದ ಸಾಲಕ್ಕೆ ಬಡ್ಡಿ ಸಹಾಯಧನ: 1. 2009–10 – 28.00 2. 2010–11 – 68.00	96.00
2	ಕಚ್ಚಾಮಾಲು ಖರೀದಿಯ ಮೇಲಿನ ಸಹಾಯಧನ: 1. 2009–10 – 57.00 2. 2010–11 – 113.00	170.00
3	ಕೈಮಗ್ಗ ಬಟ್ಟೆಗಳ ಮಾರಾಟದ ಮೇಲೆ ನೀಡಿದ ಶೇ.20 ರಿಬೇಟ್	200.00

	1. 2009–10 – 185.00 2. 2010–11 – 15.00	
4	ನೇಕಾರರ ಮಿತವ್ಯಯನಿಧಿ ಯೋಜನೆಯ ಬಡ್ಡಿ	47.00
	ಒಟ್ಟು:	**513.00**

4. ಸಿದ್ಧ ಉಡುಪು ನೀತಿ ಅನುಷ್ಠಾನ: (2851–08–202–7–01)
ಒಟ್ಟು ಆಯವ್ಯಯ ರೂ:6000.00 ಲಕ್ಷಗಳು.
ಈ ಯೋಜನೆಯ ಉಪಯೋಜನೆಗಳನ್ನು ಈ ಕೆಳಗೆ ನಮೂದಿಸಿದೆ:

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಉಪಯೋಜನೆಗಳು	ಆಯವ್ಯಯ
1	ತರಬೇತಿ	1500.00
2	ಕೌಶಲ್ಯಾಭಿವೃದ್ಧಿ ಕೇಂದ್ರಗಳ ಬಲವರ್ಧನೆ	1200.00
3	ಉತ್ತೇಜನಗಳು, ರಿಯಾಯತಿಗಳು ಮತ್ತು ಪ್ರೋತ್ಸಾಹನಗಳು	800.00
4	ಸಿದ್ಧ ಉಡುಪುಗಳ ಸಮುಚ್ಛಯ/ ಜವಳಿ ಪಾರ್ಕ್ ಮತ್ತು ಮೇಗಾ ಪ್ರಾಜೆಕ್ಟ್‌ಗಳ ಸ್ಥಾಪನೆ.	2000.00
5	ಯೋಜನಾ ನಿರ್ವಹಣೆ	500.00
	ಒಟ್ಟು:	**6000.00**

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 1243(ವೆಚ್ಚ–1)/10 ದಿನಾಂಕ: 19–08–2010ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಆರ್. ಅನಂತರಾಮು
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **2011–12ನೇ ಸಾಲಿನಲ್ಲಿ ನೇಕಾರರಿಗೆ ವಿದ್ಯುತ್ ಮಗ್ಗಗಳನ್ನು ಖರೀದಿಸಲು ಶೇ.50ರಷ್ಟು ಅನುದಾನವನ್ನು ನೀಡುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ. ವಾಕೈ 13 ಜಕೈಯೋ 2011 (1), ಬೆಂಗಳೂರು, ದಿ: 09–06–2011

ಓದಲಾಗಿದೆ: **ಜವಳಿ ಅಭಿವೃದ್ಧಿ ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪತ್ರ ಸಂಖ್ಯೆ ಕೈಜಇ/ಅಂಅಂ/ಬಂ/2011–12 ದಿ: 18–03–2011.**

ಪ್ರಸ್ತಾವನೆ :

2011–12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡಂತೆ ಘೋಷಿಸಿರುತ್ತಾರೆ.

> "ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟಗಳನ್ನು ಹೆಚ್ಚಿಸಲು ಈ ವರ್ಷ ವಿದ್ಯುತ್ ಮಗ್ಗಗಳನ್ನು ಒದಗಿಸುವ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಲಾಗುವುದು. ಮೊದಲ ಹಂತದಲ್ಲಿ 1500 ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ತಲಾ 1 ಲಕ್ಷ ರೂ. ಬೆಲೆಯ ವಿದ್ಯುತ್ ಚಾಲಿತ ಮಗ್ಗಗಳನ್ನು ಖರೀದಿಸಲು ಶೇ.50 ಅನುದಾನ ಒದಗಿಸಲಾಗುವುದು. ಈ ಉದ್ದೇಶಕ್ಕೆ 15 ಕೋಟಿ ರೂ.ಗಳನ್ನು ಒದಗಿಸಲಾಗುವುದು".

2011–12ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ ಅನುದಾನವನ್ನು ಒದಗಿಸಿಲ್ಲವಾದ ಕಾರಣ ಈ ಯೋಜನೆಯ ಅನುಷ್ಠಾನಕ್ಕೆ ಸೂಕ್ತ ಅನುದಾನವನ್ನು ನಿಗದಿಪಡಿಸಿ, ಹಂಚಿಕೆ ಮಾಡುವಂತೆ ಜವಳಿ ಅಭಿವೃದ್ಧಿ ಆಯುಕ್ತರು ಮೇಲೆ ಓದಲಾದ ತಮ್ಮ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದ ನೇಕಾರರಿಗೆ ತಲಾ ರೂ.1.00 ಲಕ್ಷ ಬೆಲೆಯ ಎರಡು ವಿದ್ಯುತ್ ಮಗ್ಗಗಳನ್ನು ಒದಗಿಸಲು ಶೇ.50 ಅನುದಾನ ನೀಡುವ ಯೋಜನೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ. ಈ ಯೋಜನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು.

ಈ ಯೋಜನೆಯ ಅನುಷ್ಠಾನಕ್ಕೆ ಆಯವ್ಯಯ ಲೆಕ್ಕಶೀರ್ಷಿಕೆ "2851-00-103-0-62 ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ" ಇದರಡಿ ರೂ.1000.00 ಲಕ್ಷ ಅನುದಾನವನ್ನು ನಿಗದಿಪಡಿಸಿದೆ.

ಈ ಯೋಜನೆಯನ್ನು ಜಾರಿಗೆ ತರಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಅನುಸರಿಸಬೇಕಾದ ಮಾನದಂಡಗಳ ರೂಪುರೇಷೆಗಳನ್ನು ನಿಗದಿಪಡಿಸತಕ್ಕದ್ದು. ಯೋಜನೆಯ ಪ್ರಗತಿಗನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ. ಎಫ್‌ಡಿ/756 ವೆಚ್ಚ 1/2011, ದಿ:12-05-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಆರ್. ಅನಂತರಾಮು
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ: ವಾಕೈ 41 ಜಕೈಯೋ 2011

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿ: 14-09-2011

ತಿದ್ದುಪಡಿ

ಸರ್ಕಾರಿ ಆದೇಶ ಸಂಖ್ಯೆ: ವಾಕೈ 41 ಜಕೈಯೋ 2011, ಬೆಂಗಳೂರು, ದಿ:25-06-2011ರ ಆದೇಶದಲ್ಲಿ ಆದೇಶ ಭಾಗದ ಕಂಡಿಕೆ 2 ಮತ್ತು 3ರ ಬದಲಾಗಿ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

"ಸದರಿ ವೆಚ್ಚವನ್ನು Payees receipt ಮೇಲೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇವರ ಮೇಲುರುಜುವಿನೊಂದಿಗೆ ಖಜಾನೆಯಿಂದ ಹಣ ಪಡೆಯಲು ಲೆಕ್ಕಾಧಿಕಾರಿಗಳು, ಕೈಮಗ್ಗ ಮತ್ತು ಜವಳಿ ಇಲಾಖೆರವರಿಗೆ ಅಧಿಕಾರ ನೀಡಲಾಗಿದೆ".

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2010 ದಿ: 20-04-2010ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ದೇವೋಜಿ ರಾವ್
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಉತ್ತರ ಕರ್ನಾಟಕದ ಕೇಂದ್ರೀಕೃತ ಸ್ಥಳಗಳಲ್ಲಿ ಉನ್ನತ ತಾಂತ್ರಿಕತೆ ಹೊಂದಿದ ಸೈಜಿಂಗ್ ಘಟಕದ ಸ್ಥಾಪನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 04 ಜಕೈಯೋ 2009, ಬೆಂಗಳೂರು, ದಿನಾಂಕ: 03–08–2009

ಓದಲಾಗಿದೆ: ಜವಳಿ ಅಭಿವೃದ್ಧಿ ಆಯುಕ್ತರವರ ಪ್ರಸ್ತಾವನೆ ಸಂಖ್ಯೆ: ಕೈಜಇ/ಜವಳಿ/ಟಿಪಿಒ–1/ಸೈಜಿಂಗ್ ಘಟಕ/2009–10, ದಿನಾಂಕ: 06–07–2009.

ಪ್ರಸ್ತಾವನೆ :

ಮಾನ್ಯ ಮುಖ್ಯಮಂತ್ರಿಗಳು 2009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಕೆಳಕಂಡಂತೆ ಘೋಷಿಸಿರುತ್ತಾರೆ.

> "ಕೈಮಗ್ಗದ ನೇಕಾರರಿಗೆ ಮೂಲಸೌಲಭ್ಯ ಕಲ್ಪಿಸಲು ಈಗಾಗಲೇ ಬೆಳಗಾವಿ ಹಾಗೂ ರಬಕವಿ–ಬನಹಟ್ಟಿಗಳಲ್ಲಿ ಸೈಜಿಂಗ್ (ನೂಲು ಸಂಸ್ಕರಣೆ) ಘಟಕಗಳನ್ನು ಸ್ಥಾಪಿಸಲು ರೂ.10 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ."

ಜವಳಿ ಅಭಿವೃದ್ಧಿ ಆಯುಕ್ತರು ದಿನಾಂಕ: 6.07.2009ರ ಮೇಲೆ ಓದಲಾದ ತಮ್ಮ ಪತ್ರದಲ್ಲಿ ಸೈಜಿಂಗ್ ಘಟಕ ಸ್ಥಾಪನೆಗೆ ವಿವರವಾದ ಯೋಜನೆಯನ್ನು ಸಲ್ಲಿಸಿರುತ್ತಾರೆ. ಯೋಜನೆಯ ಅಂದಾಜು ವೆಚ್ಚ ರೂ.482 ಲಕ್ಷಗಳು ಆಗಿರುತ್ತದೆ. ಸೈಜಿಂಗ್ ಘಟಕವನ್ನು ಬೆಳಗಾವಿಯಲ್ಲಿ ಸ್ಥಾಪಿಸುವ ಬಗ್ಗೆ ಇಲಾಖೆಯು ಪರಿಶೀಲಿಸಿದ್ದು, ಬೆಳಗಾವಿಯಲ್ಲಿ ಒಟ್ಟು 11784 ವಿದ್ಯುತ್ ಮಗ್ಗಗಳಿದ್ದು, ಇವುಗಳಲ್ಲಿ ಶೇಕಡ 95ರಷ್ಟು ಮಗ್ಗಗಳು ಸಿಲ್ಕ್ ಹಾಗೂ ಪಾಲಿಯೆಸ್ಟರ್ ಮಗ್ಗಗಳಾಗಿದ್ದು, ಇವುಗಳಿಗೆ ಸೈಜಿಂಗ್ ಘಟಕದ ಅವಶ್ಯಕತೆ ಯಿರುವುದಿಲ್ಲ. ಶೇಕಡ 5 ರಷ್ಟು ಮಾತ್ರ ಅಂದರೆ ಸುಮಾರು 500 ಮಗ್ಗಗಳು ಕಾಟನ್ ಮಗ್ಗಗಳಾಗಿರುತ್ತವೆ. ಇದರಿಂದಾಗಿ, ಸೈಜಿಂಗ್ ಘಟಕವನ್ನು ಬೆಳಗಾವಿಯಲ್ಲಿ ಸ್ಥಾಪಿಸುವುದು ಸೂಕ್ತವಲ್ಲವೆಂದು ಕಂಡು ಬಂದಿದೆ. ಬಾಗಲಕೋಟೆ ಜಿಲ್ಲೆಯಲ್ಲಿ 14,000 ಮಗ್ಗಗಳಿವೆ. ಜಿಲ್ಲೆಯ ರಬಕವಿ–ಬನಹಟ್ಟಿ

ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿರುವ ವಿದ್ಯುತ್ ಮಗ್ಗಗಳು ಹಾಗೂ ಕೈಮಗ್ಗ ನೇಕಾರರಿಗೆ ಬೇಡಿಕೆಗನುಗುಣವಾಗಿ ಸೈಜಿಂಗ್ ಬೀಮ್‌ಗಳನ್ನು ತಯಾರಿಸಲು ಜವಳಿ ಸೈಜಿಂಗ್ ಘಟಕವನ್ನು ಸ್ಥಾಪಿಸುವುದು ಅವಶ್ಯಕವೆಂದು ಕಂಡುಬಂದಿರುತ್ತದೆ. ಈ ಭಾಗದಲ್ಲಿ ಹತ್ತಿ ಬಟ್ಟೆಯನ್ನು ಹೆಚ್ಚಾಗಿ ಉತ್ಪತ್ತಿ ಮಾಡುತ್ತಿರುವುದರಿಂದ ಸೈಜಿಂಗ್ ಸೌಲಭ್ಯ ಒದಗಿಸಿದಲ್ಲಿ ಹೆಚ್ಚಿನ ಮಗ್ಗಗಳಿಗೆ ಅನುಕಾಲ ಕಲ್ಪಿಸುವ ನಿಟ್ಟಿನಲ್ಲಿ ಮೊದಲ ಹಂತದಲ್ಲಿ ಬಾಗಲಕೋಟೆ ಜಿಲ್ಲೆಯ ರಬಕವಿ – ಬನಹಟ್ಟಿಯಲ್ಲಿ ಸೈಜಿಂಗ್ ಘಟಕ ಸ್ಥಾಪಿಸಬಹುದಾಗಿದೆಯೆಂದು ಜವಳಿ ಅಭಿವೃದ್ಧಿ ಆಯುಕ್ತರು ತಿಳಿಸುತ್ತಾ, ಈ ಬಗ್ಗೆ ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಬಾಗಲ ಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿಯಲ್ಲಿ ರೂ.482 ಲಕ್ಷಗಳು (ರೂಪಾಯಿ ನಾಲ್ಕು ನೂರ ಎಂಭತ್ತೆರಡು ಲಕ್ಷಗಳು ಮಾತ್ರ) ವೆಚ್ಚದಲ್ಲಿ ಸೈಜಿಂಗ್ ಘಟಕದ ಸ್ಥಾಪನೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ. ಇದಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ: 4851–00–108–0–06–059 ಇತರೆ ಖರ್ಚು ಇದರಡಿ ರೂ.100 ಲಕ್ಷಗಳ ಅನುದಾನವನ್ನು ಯೋಜನಾ ಅನುಷ್ಠಾನ ಗೊಳಿಸುವ ಏಜೆನ್ಸಿಯಾದ ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರಿಗೆ ಬಿಡುಗಡೆ ಮಾಡಿದೆ. ಉಳಿದ ಮೊತ್ತವನ್ನು ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತವು ಸಾಲದ ಮೂಲಕ ಭರಿಸತಕ್ಕದ್ದು.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ಖಜಾನೆಯಿಂದ ಹಣ ಪಡೆಯಲು ಲೆಕ್ಕಾಧಿಕಾರಿ, ಕೈಮಗ್ಗ ಮತ್ತು ಜವಳಿ ಇಲಾಖೆ ಇವರಿಗೆ ಅಧಿಕಾರ ನೀಡಲಾಗಿದೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಜವಳಿ ಇಲಾಖೆ ಇವರು ಸದರಿ ಯೋಜನೆಯ ಪ್ರಗತಿಗನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 1165 ಇಎಕ್ಸ್‌ಪಿ–1/09, ದಿನಾಂಕ: 17.07.2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಗಣಪತಿ
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೈಮಗ್ಗ ಮತ್ತು ಜವಳಿ ಇಲಾಖೆಯ 2009–10ನೇ ಸಾಲಿನ ನೇಕಾರರ ವಸತಿ ಕಾರ್ಯಾಗಾರ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಕುರಿತು.

ಓದಲಾಗಿದೆ: 1) 2009–10ನೇ ಸಾಲಿನ ಆಯವ್ಯಯ
2) ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಜವಳಿ/ಸನಿ(ವಿ)/ವಕಾ/ಎಂ.ಎಂ.ಆರ್/ 2009–10 ದಿನಾಂಕ: 18.5.2009.

ಪ್ರಸ್ತಾವನೆ :

1) ನೇಕಾರರು ಸಂಕಷ್ಟದಲ್ಲಿದ್ದು, ಅವರಿಗೆ ಸಾಮಾಜಿಕ ಬದುಕನ್ನು ರೂಪಿಸಿ ಆರ್ಥಿಕವಾಗಿ ಸದೃಢಗೊಳಿಸಲು 2009–10ನೇ ಸಾಲಿನ ಆಯವ್ಯಯವನ್ನು ಬಡ ನೇಕಾರರಿಗೆ ತಮ್ಮ ವೃತ್ತಿಯನ್ನು ಸೂಕ್ತ ಪರಿಸರದಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ 5,000 ಮಗ್ಗದ ಕೋಣೆಯುಳ್ಳ ಮನೆಗಳನ್ನು ತಲಾ ರೂ.60,000/–ವೆಚ್ಚದಲ್ಲಿ ನಿರ್ಮಿಸಲು ರೂ.30.00 ಕೋಟಿ ಅನುದಾನವನ್ನು ನೀಡಲು ಘೋಷಿಸಲಾಗಿರುತ್ತದೆ.

2) ಕರ್ನಾಟಕ ರಾಜ್ಯದಲ್ಲಿ ಕೈಮಗ್ಗ, ವಿದ್ಯುತ್‌ಚ್ಛಾಲಿತ ಮಗ್ಗ ಮತ್ತು ಮಗ್ಗಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಮೀಣ ಪ್ರದೇಶದ ಹಾಗೂ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ನೇಕಾರರಿಗೆ ನೇಕಾರರ ವಸತಿ ಕಾರ್ಯಾಗಾರ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವುದಾಗಿ ಹಾಗೂ ಈ ಸಂಬಂಧ ಫಲಾನುಭವಿಯು ಹೊಂದಿರಬೇಕಾದ ಅರ್ಹತೆಗಳು, ಆಯ್ಕೆ, ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು, ಮಂಜೂರಾತಿ, ಅನುಷ್ಠಾನ ಮತ್ತು ಮಾನಿಟರಿಂಗ್ ಮುಂತಾದ ಅಂಶಗಳನ್ನು ಒಳಗೊಂಡ ಕಾರ್ಯವಿಧಾನಗಳ ಮಾರ್ಗಸೂಚಿಯೊಂದಿಗೆ ಆಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಮೇಲೆ ಓದಲಾದ (2) ರ ಪತ್ರದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

3) ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ವಾಕೈ 37 ಜಕೈಯೋ 2009 ಬೆಂಗಳೂರು, ದಿನಾಂಕ: 18-07-2009

4) ಕೈಮಗ್ಗ ಮತ್ತು ಜವಳಿ ಇಲಾಖೆಗೆ 2009-10ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ನೇಕಾರರ ವಸತಿ ಕಾರ್ಯಾಗಾರ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರವು ನೀಡಿದೆ.

5) ಈ ಹಿಂದೆ ಜಾರಿಯಲ್ಲಿದ್ದ ಕೇಂದ್ರ ಸರ್ಕಾರದ ಅನುದಾನಿತ ಯೋಜನೆಯಡಿಯಲ್ಲಿ ಸಹಾಯಧನ ಮತ್ತು ಸಾಲ ಎರಡೂ ಇದ್ದಂತೆ ನೇಕಾರರ ವಸತಿ ಕಾರ್ಯಾಗಾರ ಯೋಜನೆಯಲ್ಲಿಯೂ ಸಹ ಸಾಲದ ವಂತಿಗೆಯನ್ನು ಅಳವಡಿಸಿಕೊಳ್ಳುವುದು. ಇದರಂತೆ ಸಹಾಯಧನ ರೂ.30,000/-,

ಸಾಲ ರೂ.30,000/– ಫಲಾನುಭವಿಯ ವಂತಿಗೆ ರೂ.5,000/– ಸೇರಿ ಒಟ್ಟು ಘಟಕದ ವೆಚ್ಚ ರೂ.65,000/– ದಂತೆ ಅಳವಡಿಸಿಕೊಳ್ಳುವುದು.

6) ಈ ಸಂಬಂಧ ಫಲಾನುಭವಿಯು ಹೊಂದಿರಬೇಕಾದ ಅರ್ಹತೆಗಳು, ಆಯ್ಕೆ, ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು, ಮಂಜೂರಾತಿ, ಅನುಷ್ಠಾನ ಮತ್ತು ಮಾನಿಟರಿಂಗ್ ಮುಂತಾದ ಅಂಶಗಳನ್ನು ಒಳಗೊಂಡ ಕಾರ್ಯವಿಧಾನಗಳ ಮಾರ್ಗಸೂಚಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

7) ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 22 ಎಫ್‌ಆರ್‌ಒ 2009 ದಿನಾಂಕ: 2.7.2009 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1127 ವೆಚ್.1/2009 ದಿನಾಂಕ: 14/07/2009ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಿ.ರವಿಕುಮಾರ್
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೈಮಗ್ಗ ಮತ್ತು ಜವಳಿ ಇಲಾಖೆಯ 2009–10ನೇ ಸಾಲಿನ ನೇಕಾರರ ವಸತಿ ಕಾರ್ಯಾಗಾರ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಕುರಿತು–ಪರಿಷ್ಕೃತ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 37 ಜಕೈಯೋ 2009, ಬೆಂಗಳೂರು, ದಿನಾಂಕ: 28.10.2009.

ಓದಲಾಗಿದೆ: 1. 2009–10ನೇ ಸಾಲಿನ ಆಯವ್ಯಯ.
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂ:ಕೈಜಇ/ಜವಳಿ/ಸನಿ(ವಿ)/ವಕಾ/ಎಂ.ಎಂ.ಆರ್/2009–10, ದಿನಾಂಕ: 18.05.2009.
3. ಸರ್ಕಾರದ ಆದೇಶ ಸಂಖ್ಯೆ:ವಾಕೈ 37 ಜಕೈಯೋ 2009. ದಿನಾಂಕ: 18.07.2009.
4. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂ:ಕೈಜಇ/ಜವಳಿ/ಸನಿ(ವಿ)/ವಕಾ/ಎಂ.ಎಂ.ಆರ್/2009/10. ದಿನಾಂಕ: 17.09.009.

ಪ್ರಸ್ತಾವನೆ :

ನೇಕಾರರು ಸಂಕಷ್ಟದಲ್ಲಿದ್ದು, ಅವರಿಗೆ ಸಾಮಾಜಿಕ ಬದುಕನ್ನು ರೂಪಿಸಿ, ಆರ್ಥಿಕವಾಗಿ ಸದೃಢಗೊಳಿಸಲು 2009–10ನೇ ಸಾಲಿನ ಆಯವ್ಯಯದಲ್ಲಿ ಬಡ ನೇಕಾರರಿಗೆ ತಮ್ಮ ವೃತ್ತಿಯನ್ನು ಸೂಕ್ತ ಪರಿಸರದಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ 5,000 ಮಗ್ಗದ ಕೋಣೆಯುಳ್ಳ ಮನೆಗಳನ್ನು ತಲಾ ರೂ.60,000/–ವೆಚ್ಚದಲ್ಲಿ ನಿರ್ಮಿಸಲು ರೂ.30.00 ಕೋಟಿಗಳ ಅನುದಾನವನ್ನು ನೀಡಲು ಘೋಷಿಸಲಾಗಿರುತ್ತದೆ.

2. ಅದರನ್ವಯ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಜವಳಿ ಅಭಿವೃದ್ಧಿ ಆಯುಕ್ತರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿದ್ದರು.

3. ನೇಕಾರರ ವಸತಿ ಕಾರ್ಯಾಗಾರ ಯೋಜನೆಗೆ ಸಂಬಂಧಿಸಿದಂತೆ ಮೇಲೆ (3) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಈ ಯೋಜನೆಯಡಿ ವೆಚ್ಚವನ್ನು ಈ ಕೆಳಕಂಡಂತೆ ಭರಿಸಲು ಆದೇಶಿಸಲಾಗಿದೆ:–

1. ಸರ್ಕಾರದ ಸಹಾಯಧನ	ರೂ. 30,000/–
2. ನೇಕಾರರಿಂದ ಸಾಲ	ರೂ. 30,000/–
3. ಫಲಾನುಭವಿಗಳ ಪಾಲು	ರೂ. 5,000/–
ಒಟ್ಟು	**ರೂ. 65,000/–**

4. ಈ ಆದೇಶದಂತೆ ಸಹಾಯಧನವನ್ನು ಸ್ವೀಕರಿಸಲು ನೌಕರರು ಒಪ್ಪಿರುವುದಿಲ್ಲವೆಂದು ತಿಳಿಸುತ್ತಾ, ಪ್ರತಿ ಘಟಕದ ವೆಚ್ಚ ರೂ.65,000/–ಗಳಿಗೆ ನಿಗದಿಪಡಿಸಿ, ಅದರಲ್ಲಿ ಸಹಾಯಧನ ರೂ.60,000/– ಹಾಗೂ ಫಲಾನುಭವಿಗಳ ವಂತಿಗೆ ರೂ.5,000/– ರಂತೆ ಭರಿಸಲು ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಮೇಲೆ (4)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ಕೋರಿರುತ್ತಾರೆ.

5. ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಲಾಗಿದೆ.

ಆದೇಶ

6. ಕೈಮಗ್ಗ ಮತ್ತು ಜವಳಿ ಇಲಾಖೆಯ 2009–10ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

7. ಈ ಹಿಂದೆ ಜಾರಿಯಲ್ಲಿನ ಕೇಂದ್ರ ಸರ್ಕಾರದ ಅನುದಾನಿತ ಯೋಜನೆಯಡಿಯಲ್ಲಿ ಸಹಾಯಧನ ಮತ್ತು ಸಾಲ ಎರಡೂ ಇದ್ದಂತೆ ನೇಕಾರರ ವಸತಿ ಕಾರ್ಯಾಗಾರ ಯೋಜನೆಯಲ್ಲಿಯೂ ಸಹ ಸಾಲದ ವಂತಿಗೆಯನ್ನು ಅಳವಡಿಸಿಕೊಳ್ಳುವುದು. ಇದರಂತೆ ಸಹಾಯಧನ ರೂ.40,000/–, ಸಾಲ ರೂ.20,000/–, ಫಲಾನುಭವಿಯ ವಂತಿಗೆ ರೂ.5,000/– ಸೇರಿ ಒಟ್ಟು ಘಟಕದ ವೆಚ್ಚ ರೂ.65,000/– ದಂತೆ ಅಳವಡಿಸಿಕೊಳ್ಳುವುದು.

8. ಈ ಸಂಬಂಧ ಫಲಾನುಭವಿಯು ಹೊಂದಿರಬೇಕಾದ ಅರ್ಹತೆಗಳು, ಆಯ್ಕೆ, ಪ್ರಸ್ತಾವನೆಗಳನ್ನು ಸಿದ್ಧಪಡಿಸುವುದು, ಮಂಜೂರಾತಿ, ಅನುಷ್ಠಾನ ಮತ್ತು ಮಾನಿಟರಿಂಗ್ ಮುಂತಾದ ಅಂಶಗಳನ್ನು ಒಳಗೊಂಡ ಕಾರ್ಯವಿಧಾನಗಳ ಮಾರ್ಗಸೂಚಿಯನ್ನು ಪ್ರತ್ಯೇಕವಾಗಿ ಹೊರಡಿಸ ಲಾಗುವುದು.

9. ಈ ಪರಿಷ್ಕೃತ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 1578 ವೆಚ್ಚ–109, ದಿನಾಂಕ: 22.10.2009ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಆರ್. ಅನಂತರಾಮು
ಪೀಠಾಧಿಕಾರಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

KIADB ಯವರು ಗುರುತಿಸಿರುವ ಜಮೀನು

35 (13) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಕೆ.ಐ.ಎ.ಡಿ.ಬಿ. ಯವರು ಗುರುತಿಸಿರುವ ಜಮೀನುಗಳು ಯಾವುವು; ಈ ಭಾಗದಲ್ಲಿ ಯಾವಾಗ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು (ವಿವರ ಒದಗಿಸುವುದು);

ಆ) ಹಾಗಿದ್ದಲ್ಲಿ, ರೈತರುಗಳಿಂದ ಸ್ವಾಧೀನಪಡಿಸಿಕೊಂಡ ಜಮೀನು ಗಳಿಗೆ ಹಣವನ್ನು ಯಾವಾಗ ನೀಡಲಾಗುವುದು; ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು; ಈ ಕೈಗಾರಿಕೆಗಳನ್ನು ಯಾವಾಗ ಸ್ಥಾಪಿಸಲಾಗುವುದು;

ಇ) ಕೆ.ಐ.ಎ.ಡಿ.ಬಿ.ಯವರು ಗುರುತಿಸಿರುವ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಎಕರೆಗೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ; ಈ ಜಾಗದಲ್ಲಿ ಯಾರಿಗೆ ಕಾರ್ಖಾನೆ ಸ್ಥಾಪಿಸಲು ಅನುಮತಿ ನೀಡಲಾಗಿದೆ;